ಸಂಪುಟ 01 । ಸಂಚಿಕೆ 198 ಮಂಗಳವಾರ 22 ಸೆಪ್ಟೆಂಬರ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಖಡ್ಗಮೃಗ ದಿನ (World Rhino Day) ಖಡ್ಗಮೃಗಗಳ ಸಂರಕ್ಷಣೆ ಮತ್ತು ಅವು ಎದುರಿಸುತ್ತಿರುವ ಅಪಾಯಗಳ ಕುರಿತು ಜಾಗೃತಿ ಮೂಡಿಸುವ ದಿನ.

2) ವಿಶ್ವ ಕಾರ್-ಮುಕ್ತ ದಿನ (World Car Free Day) ಕಾರುಗಳ ಬಳಕೆಯನ್ನು ಕಡಿಮೆ ಮಾಡಿ, ಸಾರ್ವಜನಿಕ ಸಾರಿಗೆ, ಸೈಕಲ್ ಮತ್ತು ನಡೆದು ಹೋಗುವಂತಹ ಪರಿಸರ ಸ್ನೇಹಿ ಪ್ರಯಾಣ ವಿಧಾನಗಳನ್ನು ಉತ್ತೇಜಿಸುವ ದಿನ.

## ಸುಭಾಷಿತ

ನಿನ್ನನ್ನು ನೀನು ನಂಬದ ಹೊರತು ನಿನಗೆ ದೇವರಲ್ಲಿ ನಂಬಿಕೆ ಬಾರದು.

-ಸ್ವಾಮಿ ವಿವೇಕಾನಂದ

# ಆಡಳಿತ -ವಿಪಕ್ಷಗಳ ವಾಕ್ಸಮರ

❏ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಕಸ್ತೂರಿ ರಂಗನ್ ವರದಿ ಹಾಗೂ ಬರದ ಬಗ್ಗೆ ಚರ್ಚೆ ನಡೆಸಲು ಇಂದಿನಿಂದ ಆರಂಭವಾಗಿರುವ ವಿಧಾನ ಮಂಡಲದ ಅಧಿವೇಶನದಲ್ಲಿ ಮೊದಲ ದಿನವೇ ಆಡಳಿತ ಮತ್ತು ವಿಪಕ್ಷಗಳ ನಡುವೆ ಭಾರೀ ವಾಕ್ಸಮರ ನಡೆಯಿತು.**



ಈ ಅಧಿವೇಶನವನ್ನು ವಿಶೇಷ ಅಧಿವೇಶನ ಎಂದು ಕರೆದಿರುವುದು ನಿಯಮಾವಳಿಗೆ ವಿರುದ್ಧ, ಇದು ಮುಂದುವರೆದ ಅಧಿವೇಶನವೇ, ಇಲ್ಲವೇ ವಿಶೇಷ ಎಂಬುದನ್ನು ಸ್ಪಷ್ಟಪಡಿಸಿ. ವಿಶೇಷ ಅಧಿವೇಶನ ಕರೆಯಲು ನಿಯಮಾವಳಿಯಲ್ಲಿ ಅವಕಾಶ ಇಲ್ಲ. ವಿಶೇಷ ಚರ್ಚೆಗೆ ನಮ್ಮ ತಕರಾರಿಲ್ಲ. ಯಾವ ನಿಯಮದಡಿ ಚರ್ಚೆ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಿ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಆಗ್ರಹಿಸಿದ್ದು ಮಾತಿನ ಚಕಮಕಿಗೆ ಕಾರಣವಾಗಿ ಸದನದಲ್ಲಿ ಸ್ವಲ್ಪಮಟ್ಟಿನ ಕಾವೇರಿದ ಚರ್ಚೆಗೆ ಎಡೆ ಮಾಡಿಕೊಟ್ಟಿತು.

ಪ್ರತಿಪಕ್ಷ ನಾಯಕರ ಮಾತಿಗೆ ನಿಯಮಾವಳಿಗಳನ್ನು ಉಲ್ಲೇಖಿಸಿ ಉತ್ತರ ನೀಡಿದ ಕೃಷ್ಣ ಬೈರೇಗೌಡ ಅವರು, ನಮಗೆ ಪ್ರತಿಷ್ಠೆ ಇಲ್ಲ. ವಿಶೇಷ ಅಧಿವೇಶನ ಎಂಬುದು ನನ್ನಿಂದಾದ ತಪ್ಪಾಗಿದೆ. ಆ ತಪ್ಪನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿ, ಈ ಕುರಿತ ಕಾವೇರಿದ ಚರ್ಚೆಗೆ ತೆರೆ ಎಳೆದರು. ಇದಕ್ಕೂ ಮೊದಲು ನಿಲುವಳಿ ಸೂಚನೆ ಮಂಡನೆ ವಿಚಾರದಲ್ಲೂ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಕೃಷ್ಣ ಬೈರೇಗೌಡರ ನಡುವೆ ವಾಗ್ವಾದವೇ ನಡೆಯಿತು.

ಇಂದು ಸದನ ಆರಂಭವಾಗಿ ಸಂತಾಪ, ಕಾಗದ ಪತ್ರಗಳ ಮಂಡನೆ ಮುಗಿದ ನಂತರ ಪ್ರತಿಪಕ್ಷ ನಾಯಕರಾದ ಆರ್. ಅಶೋಕ್ ಅವರು ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ನಿಲುವಳಿ ಸೂಚನೆ ಪ್ರಸ್ತಾಪಕ್ಕೆ ಮುಂದಾದಾಗ ಸಚಿವರಾದ ಕೃಷ್ಣ ಬೈರೇಗೌಡ ಅವರು ಎದ್ದುನಿಂತು ನಿಲುವಳಿ ಸೂಚನೆ ಅವಶ್ಯ ಇಲ್ಲ. ಅದೇ ವಿಚಾರದ ಬಗ್ಗೆ ಸದನದಲ್ಲಿ ವಿಶೇಷ ಚರ್ಚೆ ಇದೆ. ನಿಲುವಳಿ ಕೈಗೆತ್ತಿಕೊಳ್ಳಲು ಬರಲ್ಲ ಎಂದು ಹೇಳಿದರು. ಆದರೆ ಅದನ್ನು ಒಪ್ಪದ ಪ್ರತಿಪಕ್ಷ ನಾಯಕರು ನಿಲುವಳಿ ಪ್ರಸ್ತಾವಕ್ಕೆ ಅವಕಾಶ ಕೊಡಬೇಕು. ನಂತರ ಅದು ಬರುತ್ತದೋ, ಇಲ್ಲವೋ ಎಂಬುದನ್ನು ಸಭಾಧ್ಯಕ್ಷರು ತೀರ್ಮಾನ ಮಾಡಬೇಕು. ಅದು ಬಿಟ್ಟು ಅವಕಾಶವೇ ಕೊಡುವುದಿಲ್ಲ ಎನ್ನುವುದು ಸರಿಯಲ್ಲ ಎಂದು ಹೇಳಿದರು.

ಈ ಹಂತದಲ್ಲಿ ಬಿಜೆಪಿಯ ಸುನೀಲ್‌ಕುಮಾರ್, ಡಾ. ಸಿ.ಅಶ್ವತ್ಥನಾರಾಯಣ, ಅರವಿಂದ ಬೆಲ್ಲದ ಇವರೆಲ್ಲಾ ಪ್ರತಿಪಕ್ಷ ನಾಯಕರ ಬೆಂಬಲಕ್ಕೆ ನಿಂತು, ಮೊದಲು ಮಾತನಾಡಲು ಅವಕಾಶ ಕೊಡಿ, ನಂತರ ತೀರ್ಮಾನ ಮಾಡಿ. ನಿಲುವಳಿ ಸೂಚನೆಯಡಿ ಮಾತನಾಡಲು ಅವಕಾಶ ಕೊಡದೇ ತೀರ್ಮಾನ ಮಾಡುವುದು ಸರಿಯಲ್ಲ ಎಂದು ಹೇಳಿದರು. ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಸದನದಲ್ಲಿ ಸ್ವಲ್ಪಮಟ್ಟಿಗೆ ಗದ್ದಲದ ವಾತಾವರಣ ರೂಪುಗೊಂಡಿತು.

ನಂತರ ಮಾತು ಮುಂದುವರೆಸಿದ ಪ್ರತಿಪಕ್ಷ ನಾಯಕ ಆರ್. ಅಶೋಕ್, ವಿಶೇಷ ಅಧಿವೇಶನ ಇಲ್ಲವೇ ಮುಂದುವರೆದ ಅಧಿವೇಶನ ಎಂಬದುನ್ನು ಸ್ಪಷ್ಟಪಡಿಸಿ. ನಾನು ನನ್ನ ನಿಲುವಳಿ ಸೂಚನಾ ಪ್ರಸ್ತಾವವನ್ನು ವಾಪಸ್ ಪಡೆಯಲು ಸಿದ್ಧ. ಇದರಲ್ಲಿ ನನಗೆ ಯಾವುದೇ ಪ್ರತಿಷ್ಠೆ ಇಲ್ಲ. ಕಸ್ತೂರಿ ರಂಗನ್ ವರದಿಯ ಬಗ್ಗೆ ಒಂದು ದಿನ ಅಲ್ಲ, ಮೂರು ದಿನ ಮಾತನಾಡಲು ನಾವು ಸಿದ್ದರಿದ್ದೇವೆ. ಆದರೆ ಸರ್ಕಾರವೇ ಒಂದು ದಿನಕ್ಕೆ ಚರ್ಚೆಯನ್ನು ಸೀಮಿತಗೊಳಿಸಿದೆ ಎಂದು ಹೇಳಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಸಚಿವ ಕೃಷ್ಣಬೈರೇಗೌಡ ಅವರು, ವಿಶೇಷ ಅಧಿವೇಶನ, ಮುಂದುವರೆದ ಅಧಿವೇಶನ ಎಲ್ಲವೂ ಸರಿ. ಇದು ಮುಂದುವರೆದ ಅಧಿವೇಶನ ಎಂದು ಹೇಳಿದಾಗ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು ತಾವು ನಿಲುವಳಿ ಸೂಚನೆ ಪ್ರಸ್ತಾವವನ್ನು ವಾಪಸ್ ಪಡೆದಿರುವುದಾಗಿ ಹೇಳಿ, ಕಸ್ತೂರಿ ರಂಗನ್ ವರದಿಯ ವಿಶೇಷ ಚರ್ಚೆಗೆ ಅನುವು ಮಾಡಿಕೊಟ್ಟರು.

## ರಾಯಚೂರು ಕಾಂಗ್ರೆಸ್ ನೂತನ ಜಿಲ್ಲಾಧ್ಯಕ್ಷ ಕೆ. ಶಾಂತಪ್ಪ ಅವರಿಗೆ ಸನ್ಮಾನ

❏ ನೈಜ್ಯ ದೇಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಕೆ. ಶಾಂತಪ್ಪ ಅವರ ಪದಗ್ರಹಣ ಕಾರ್ಯಕ್ರಮವು ನಗರದ ಗಂಜ್ ಕಲ್ಯಾಣ ಮಂಟಪದಲ್ಲಿ ನಡೆಯಿತು.**



ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷರಾದ ಫಯಾಜ್, ಕಾರ್ಯದರ್ಶಿ ಮುಜಾಹಿದ್ ಮರ್ಚೆಡ್, ಅಫ್ಜಲ್ ನಾಯಿಕ್, ಡಾ. ಸುಹೇಲ್, ಇರ್ಫಾನ್ ಅಬಕಾರಿ, ಮಹೇಬೂಬ್, ರಸೂಲ್ ಖುರೈಷಿ, ಮಹೇಬೂಬು ಖುರೈಷಿ, ಖದೀರ್ ನಾಯಿಕ್, ಸಮಿಯುದ್ದಿನ್, ಹಫೀಜ್ ಹುಸೇನ್, ನೂರಜಹಾನ್ ಸೇರಿದಂತೆ ಹಲವರು ಕೆ. ಶಾಂತಪ್ಪ ಅವರನ್ನು ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು. ನೂತನ ಜಿಲ್ಲಾಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಿರುವ ಕೆ. ಶಾಂತಪ್ಪ ಅವರಿಗೆ ಶುಭ ಹಾರೈಸಿದ ಮುಖಂಡರು, ಪಕ್ಷದ ಸಂಘಟನೆ ಹಾಗೂ ಜನಪರ ಕಾರ್ಯಗಳಲ್ಲಿ ಯಶಸ್ಸು ದೊರೆಯಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಉಪಸ್ಥಿತರಿದ್ದರು.

## ಕಸ್ತೂರಿರಂಗನ್ ವರದಿ ಕುರಿತು ವಿಶೇಷ ಅಧಿವೇಶನದಲ್ಲಿ ಗದ್ದಲ, ಮಾತಿನ ಚಕಮಕಿ

❏ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ಪಶ್ಚಿಮಘಟ್ಟಗಳ ಕಸ್ತೂರಿರಂಗನ್ ಸಮಿತಿ ವರದಿ ಹಾಗೂ ಬರ ಪರಿಸ್ಥಿತಿ ಕುರಿತು ಚರ್ಚಿಸಲು ಆರಂಭವಾದ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ಮತ್ತು ಪ್ರತಿಭಟನೆಗೆ ವೇದಿಕೆಯಾಯಿತು.**




ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಕಸ್ತೂರಿರಂಗನ್ ವರದಿ ವಿಚಾರವನ್ನು ಪ್ರಸ್ತಾಪಿಸಿದ ಬಳಿಕವೂ ಪ್ರತಿಪಕ್ಷ ಸದಸ್ಯರ ಪ್ರತಿಭಟನೆ ಮುಂದುವರಿದ ಹಿನ್ನೆಲೆಯಲ್ಲಿ ಸಭಾಪತಿ ಕಲಾಪವನ್ನು 10 ನಿಮಿಷ ಮುಂದೂಡಿದರು. ಕಸ್ತೂರಿರಂಗನ್ ವರದಿಯನ್ನು ಒಪ್ಪುವುದಿಲ್ಲ ಎಂಬ ನಿಲುವನ್ನು ರಾಜ್ಯ ಸರ್ಕಾರ ಈಗಾಗಲೇ ಹಲವು ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರಗಳ ಮೂಲಕ ತಿಳಿಸಿದೆ.. ಕೇಂದ್ರ ಸರ್ಕಾರ ಪದೇಪದೇ ಅಧಿಸೂಚನೆಗಳನ್ನು ಹೊರಡಿಸುತ್ತಿದ್ದು, ಇದೀಗ ಹೊರಡಿಸಿರುವ ಕರಡು ಅಧಿಸೂಚನೆಗೂ ರಾಜ್ಯ ಸರ್ಕಾರದ ವಿರೋಧವಿದೆ ಎಂದು ಸ್ಪಷ್ಟಪಡಿಸಿದರು.

ಈ ಕಾರಣಕ್ಕಾಗಿಯೇ ವಿಶೇಷ ಅಧಿವೇಶನದಲ್ಲಿ ವಿಚಾರವನ್ನು ಚರ್ಚೆಗೆ ತಂದಿದ್ದೇವೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ರೈತರು, ಸ್ಥಳೀಯ ಜನರು ಹಾಗೂ ಜನಪ್ರತಿನಿಧಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿರುವುದರಿಂದ, ಆ ಎಲ್ಲ ಅಭಿಪ್ರಾಯಗಳನ್ನೂ ಸದನದಲ್ಲಿ ಸಮಗ್ರವಾಗಿ ಚರ್ಚಿಸಬೇಕಾಗಿದೆ ಎಂದು ಪರಮೇಶ್ವರ್ ಹೇಳಿದರು.

## ನಿರಂತರ ಪರಿಶ್ರಮದಿಂದಲೇ ಹೊಸ ದರೋಜಿ ಸಹಕಾರ ಸಂಘದ ಅಭಿವೃದ್ಧಿ: ಮರಿಸ್ವಾಮಿ ನಾಯಕ
## ಹೊಸ ದರೋಜಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 7.87 ಲಕ್ಷ ನಿವ್ವಳ ಲಾಭ

❏ ನೈಜ್ಯ ದೇಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕು ಸಮೀಪರ ಹೊಸ ದರೋಜಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಛೇರಿ ಅವರಣದಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಮಹಾಜನ ಸಭೆ ಸೋಮವಾರ ನಡೆಯಿತು.**



ಸಂಘದ ಅಧ್ಯಕ್ಷ ಮರಿಸ್ವಾಮಿ ನಾಯಕ ಸಭೆಯ ಅಧ್ಯಕ್ಷತವಹಿಸಿ ಮಾತನಾಡಿ, ಸಂಘವು ರೈತರ, ಸ್ಥಳೀಯ ಮುಖಂಡರ ಸಹಕಾರದ ಜೊತೆಗೆ ಸಂಘದ ಸಿಬ್ಬಂದಿಗಳ ನಿರಂತರ ಪರಿಶ್ರಮವೇ ಅಭಿವೃದ್ಧಿಗೆ ನಾಂದಿಯಾಗಿದೆ ಎಂದರು. ನಂತರ ಮುಖ್ಯ ಕಾರ್ಯನಿರ್ವಾಹಕ ವಿ.ಮಲ್ಲಿಕಾರ್ಜುನ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘದಲ್ಲಿ 4428 ಸದಸ್ಯರಿದ್ದು, 1 ಕೋಟಿ 7 ಲಕ್ಷ 78 ಸಾವಿರ ಠೇವಣಿ ಸಂಗ್ರಹಿಸಿದೆ. ಕೆಸಿಸಿ ಸಾಲ 437 ಲಕ್ಷ, ಮಧ್ಯಮಾವಧಿ ಸಾಲ 45ಲಕ್ಷ, ಸ್ವಸಹಾಯಕ ಸಂಘಗಳಿಗೆ 14 ಲಕ್ಷ, ಮೀನು ಸಾಕಾಣಿಕೆಗೆ 12 ಲಕ್ಷ ಸೇರಿದಂತೆ ಒಟ್ಟು 708 ಲಕ್ಷ ಸಾಲ ವಿತರಿಸಿದೆ. 2025-26ನೇ ಸಾಲಿನಲ್ಲಿ ಸಂಘವು 7 ಲಕ್ಷ 87 ಸಾವಿರ 971 ರೂ.ಗಳ ನಿವ್ವಳ ಲಾಭಗಳಿಸಿದೆ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎನ್.ವಿ. ಹನುಮಂತ, ನಿರ್ದೇಶಕರಾದ ಪಿ.ಎಸ್.ಲಿಂಗಪ್ಪ, ಡಿ.ವಿ.ಮಂಜುನಾಥ, ಕೆ.ರಾಮಾಂಜನೇಯ್ಯ, ಎನ್.ವೆಂಕಟೇಶ, ಡಿ.ಶ್ರೀನಿವಾಸ, ವಲಿ ಮಸೀದಿ, ಹೆಚ್. ದಾನಪ್ಪ, ಕೆ.ತಿಮ್ಮಯ್ಯ, ಟಿ.ಶೋಭಾದೇವಿ, ನಾಗಮ್ಮ, ರಮೇಶ(ಕ್ಷೇತ್ರಾಧಿಕಾರಿ), ಜಿಪಂ ಮಾಜಿ ಸದಸ್ಯ ವಿ.ಜನಾರ್ದನ, ತಾಪಂ ಮಾಜಿ ಉಪಾಧ್ಯಕ್ಷ ಮಾದಾಪುರ ಮಾರಪ್ಪ, ಮುಖಂಡರಾದ ಟಿ.ರಸೂಲ್ ಸಾಬ್, ಮಜ್ಜಿಗೆ ನಾಗಪ್ಪ ಸೇರಿದಂತೆ ರೈತರು, ಸಿಬ್ಬಂದಿ ಇದ್ದರು.

## ಮಾಜಿ ಸಚಿವ ಡಾಕ್ಟರ್ ಹೆಚ್ ಸಿ ಮಹದೇವಪ ರವರನ್ನು ಸನ್ಮಾನಿಸಿ ಗೌರವಿಸಿದ ನೂತನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬೀರಿಹುಂಡಿ ಬಸವಣ್ಣ

❏ ನೈಜ್ಯ ದೇಸೆ ನ್ಯೂಸ್

**ತಾಂಡವಪುರ ಸೆಪ್ಟೆಂಬರ್ 21 ಮಾಜಿ ಸಚಿವ ಡಾಕ್ಟರ್ ಎಚ್ ಸಿ ಮಹದೇವಪ್ಪನವರನ್ನು ಅವರ ನಿವಾಸದಲ್ಲಿ ನೂತನ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬೀರೇಹುಂಡಿ ಬಸವಣ್ಣ ರವರು ಭೇಟಿ ಮಾಡಿ ಅವರನ್ನು ಸನ್ಮಾನಿಸಿ ಗೌರವಿಸಿದರು**



ಸನ್ಮಾನ ಗೌರವ ಸ್ವೀಕರ್ ಮಾತನಾಡಿದ ಮಹದೇವಪ್ಪನವರು ಜಿಲ್ಲೆಯಲ್ಲಿ ತಳಮಟ್ಟದಿಂದ ಪಕ್ಷ ಸಂಘಟನೆಗೆ ಹೆಚ್ಚು ಶ್ರಮವಹಿಸುವ ಜೊತೆಗೆ ಕಾರ್ಯಕರ್ತನನ್ನು ಒಗ್ಗೂಡಿಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲುವುದಕ್ಕೆ ಹೆಚ್ಚು ಶ್ರಮವಹಿ ಎಂದು ತಿಳಿಸಿದ ಮಹದೇವಪ್ಪನವರು
ಮೈಸೂರು ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಜೊತೆಗೆ ಸರ್ಕಾರದ ಯೋಜನೆಗಳು ಮತ್ತು ಸವಲತ್ತುಗಳನ್ನು ಸಾರ್ವಜನಿಕರಿಗೆ ಅದರಲ್ಲೂ ಕಟ್ಟ ಕಡೆಯ ವ್ಯಕ್ತಿಗಳಿಗೆ ಸಿಗುತ್ತಿದ್ದೀಯಾ ಇಲ್ಲವಾ ಎಂಬುದನ್ನ ತಿಳಿದುಕೊಂಡು ಅಂತಹ ಗ್ರಾಮಗಳಿಗೆ ಭೇಟಿಕೊಟ್ಟು ಅವರಿಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೊರಕಿಸಿಕೊಡಲು ಹೆಚ್ಚು ಸಮವಹಿಸಿ ನಾವು ಕೂಡ ಪಕ್ಷ ಸಂಘಟನೆಗೆ ನಿಮಗೆ ಎಲ್ಲಾ ರೀತಿಯ ಸಹಕಾರವನ್ನು ನೀಡುತ್ತೇವೆ ಎಂದು ಮಹಾದೇವಪ್ಪನವರು ತಿಳಿಸಿದರು

ಈ ಸಂದರ್ಭದಲ್ಲಿ ನೂತನ ಜಿಲ್ಲಾಧ್ಯಕ್ಷ ಬೀರಿಹುಂಡಿ ಬಸವಣ್ಣ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷರಾದ ಕಡಕೋಳ ನಾಗರಾಜು ಕಾಂಗ್ರೆಸ್ ಮುಖಂಡ ದೇವನೂರು ಬುಲೆಟ್ ಮಾದೇವಪ್ಪ ಎಚ್ ಸಿ ಮಹದೇವಪ್ಪನವರ ಅಭಿಮಾನಿ ಬಳಗದ ಅಧ್ಯಕ್ಷ ಕಡಕೋಳ ಭರತ್ ಹಾಗೂ ಕಾಂಗ್ರೆಸ್ ಮುಖಂಡರು ಈ ಸಂದರ್ಭದಲ್ಲಿ ಹಾಜರಿದ್ದರು

## ರೈತರಿಗೆ ಬರ ಪರಿಹಾರ ರೈತರ ಜಮೀನಿಗೆ ನೀರು ಹಾಗೂ 9 ತಾಸು ನಿರಂತರ ವಿದ್ಯುತ್ ಸರಬರಾಜು ಮಾಡುವಂತೆ ಹಸಿರು ಸೇನೆ ಒತ್ತಾಯ

❏ ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ನೀರಾವರಿ ಪ್ರದೇಶದ ರೈತರ ಹಿತದೃಷ್ಟಿಯಿಂದ ಪ್ರಸ್ತುತ 10 ದಿನಗಳ ಕಾಲ ನೀರು ನಿಲ್ಲಿಸುವ ಪದ್ಧತಿಯನ್ನು ಬದಲಿಸಬೇಕು, ಮಳೆಯಾಗದೇ ತೇವಾಂಶದ ಕೊರತೆ ಹೆಚ್ಚಾಗಿದ್ದರಿಂದ ಬೆಳೆಗಳಿಗೆ 7 ದಿನ ನೀರು ನಿಲ್ಲಿಸಿ, ನಿರಂತರ 14 ದಿನಗಳ ಕಾಲ ಜಮೀನುಗಳಿಗೆ ನೀರು ಒದಗಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಅಧ್ಯಕ್ಷ ದುರ್ಗಾ ಪ್ರಸಾದ್ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು .**



ಕಾಲುವೆ ಡಿಸ್ಟ್ರಿಬ್ಯೂಟರ್ ಸಿಡಿಗಳು ಹಾಳಾಗಿವೆ. ಇದರಿಂದ ಹೊಲ ಹಾಗೂ ಗದ್ದೆಗಳಿಗೆ ಹೋಗಲು ರೈತರು ತುಂಬ ತೊಂದರೆ ಅನುಭವಿಸುತ್ತಿದ್ದಾರೆ. ಕೆಬಿಜೆಎನ್ಎಲ್ ಅಧಿಕಾರಿಗಳು ದುರಸ್ತಿ ಕಾಮಗಾರಿಯನ್ನು ಕೈಗೊಂಡು ಅರ್ಧಕ್ಕೆ ನಿಲ್ಲಿಸಿರುವುದರಿಂದ ಮತ್ತಷ್ಟು ರೈತರು ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ ಸಿಡಿಗಳ ದುರಸ್ತಿ ಕಾರ್ಯವನ್ನು ಬೇಗನೆ ಮುಗಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಬೇಕು. ತಾಲೂಕಿನಾದ್ಯಂತ ಸಂತೆ ಮಾರುಕಟ್ಟೆಯಲ್ಲಿ ರೈತರ ತಂದ ತರಕಾರಿ ಹಾಗೂ ಇತರೆ ಬೆಳೆಗಳಿಗೆ ನಿಯಮ ಬಾಹಿರವಾಗಿ ಅತಿ ಹೆಚ್ಚು ಕರವಸೂಲಿ ಮಾಡುತ್ತಿದ್ದು, ಕೂಡಲೇ ರೈತರಿಂದ ಕರವಸೂಲಿಯನ್ನು ನಿಲ್ಲಿಸಿ ರೈತರು ತಮ್ಮ ಸರಕುಗಳನ್ನು ಉಚಿತವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಿಕೊಡಬೇಕು.

ಅಲ್ಲದೇ ಲಿಂಗಸಗೂರು ಮಾರುಕಟ್ಟೆಯಲ್ಲಿ ತರಕಾರಿ ಹರಾಜು ಪ್ರಕ್ರಿಯೆಯನ್ನು ತಡರಾತ್ರಿ ಆರಂಭವಾಗುತ್ತಿದ್ದು, ಕೂಡಲೇ ಇದನ್ನು ತಡೆದು ಬೆಳಿಗ್ಗೆ 6.00 ಘಂಟೆಗೆ ಹರಾಜು ಪ್ರಕ್ರಿಯೆ ನಡೆಸಬೇಕು ಹಾಗೂ ಈ ಹರಾಜು ಪ್ರಕ್ರಿಯೆಯನ್ನು ಎಪಿಎಂಸಿ ಆವರಣಕ್ಕೆ ಸ್ಥಳಾಂತರ ಮಾಡಬೇಕು. ಹಳೆ ಬೆಂಚಲದೊಡ್ಡಿ ಯಿಂದ 5 ಕಿ.ಮೀ ದೂರದ ಹೊಸ ಬೆಂಚಲದೊಡ್ಡಿಗೆ ಸ್ಥಳಾಂತರ ಮಾಡಿದ್ದು, ಇದು ಅಂಗನವಾಡಿಯಾಗುವುದಿಲ್ಲ ಬದಲಿಗೆ ಶಾಲೆಯಾಗುತ್ತದೆ.

ಗ್ರಾಮದಲ್ಲಿಯೇ ಅಂಗನವಾಡಿ ಕೇಂದ್ರ ಇರಬೇಕೆಂಬ ನಿಯಮವನ್ನು ಉಲ್ಲಂಘಿಸಿ ಚಿಕ್ಕ ಮಕ್ಕಳು 5 ಕಿ.ಮೀ. ಕಾಲುವೆ ಮೇಲೆ ನಡೆದುಕೊಂಡು ಹೋಗಲು ಸಾಧ್ಯವೇ ಕಾರಣ ಕೂಡಲೇ ಅಂಗನವಾಡಿ ಸ್ಥಳಾಂತರ ಆದೇಶವನ್ನು ಹಿಂಪಡೆಯಬೇಕು.

ರೈತರ ಸಂಕಷ್ಟವನ್ನು ಮಾನವೀಯ ನೆಲೆಯಲ್ಲಿ ಪರಿಗಣಿಸಿ, ಮೇಲ್ಕಂಡ ಬೇಡಿಕೆಗಳನ್ನು ತುರ್ತಾಗಿ ಈಡೇರಿಸುವ ಮೂಲಕ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಬೇಕೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಬಸವರಾಜ ಅಂಗಡಿ , ಮಹ್ಮದ್ ಸಾಬ , ಕರಿಯಪ್ಪ , ರಾಮಣ್ಣ ಅಡಿಕೇರ , ರಂಗಪ್ಪ , ಹುಲಗಪ್ಪ ನಾಯಕ , ರಾಮಣ್ಣ ಗೌಡೂರು , ಸೋಮರೆಡ್ಡಿ , ಅಮರಯ್ಯ ಗುಡದನಾಳ , ಹನುಮಂತ , ಆದಪ್ಪ , ದುರಗಪ್ಪ ಗೌಡೂರು , ಹುಲಗಪ್ಪ ಡೊಳ್ಳು , ರಂಗಪ್ಪ , ಭೀಮಪ್ಪ , ಹೋಳೆಪ್ಪ , ವೀರಭದ್ರ ಹುಲಗಪ್ಪ ದೊಡ್ಡಿ , ಶಿವನಗೌಡ , ಇಮಾಮ್‌ಸಾಬ್ , ಶರಣಪ್ಪ ಗುಡದನಾಳ , ಸಿದ್ದು ಗೌಡೂರು , ಸಿದ್ದು ಕರಿಕುರಿ ,ಬಸವರಾಜ ನಾಯಕ , ಅಮರೇಶ ಸೇರಿದಂತೆ ಇತರರು ಇದ್ದರು .

## ಸಾಹಿತ್ಯ ಸಿಂಚನ

### ಹಸಿರಿನ ಮೌನ

ಹಸಿರಿನ ಮಡಿಲಲ್ಲಿ ಮೌನದ ಮಾತು,
ಎಲೆಗಳ ಸದ್ದಿನಲ್ಲಿ ಪ್ರಕೃತಿಯ ಗೀತ.
ತಂಪಾದ ಗಾಳಿಯ ಮೃದುವಾದ ಸ್ಪರ್ಶ,
ಮನದೊಳಗೆ ಮೂಡಿಸಿತು ಹೊಸ ಹರ್ಷ.

ಮರಗಳ ನೆರಳಲಿ ನೆಮ್ಮದಿಯ ಕ್ಷಣ,
ಹೂವಿನ ನಗುವಲಿ ಬದುಕಿನ ಕಿರಣ.
ಮಂಜಿನ ಹನಿಯಲಿ ಬೆಳಕಿನ ಕನಸು,
ಹಸಿರಿನ ಲೋಕವೇ ಮನದ ಸೊಗಸು.

ಹಕ್ಕಿಗಳ ಹಾಡು ದೂರದಲಿ ಕೇಳಿ,
ಮೌನದ ಸಂಗೀತ ಮನದಲಿ ಮೂಡಿ.
ನದಿಯ ಅಲೆಗಳು ನಿಧಾನವಾಗಿ ಹರಿದು,
ಪ್ರಕೃತಿಯ ಕಥೆಯನ್ನು ಕಿವಿಯಲ್ಲಿ ಹೇಳಿತು.

ಮಾತಿಲ್ಲದ ಮರಗಳು ಭಾವನೆ ಹೇಳಿದವು,
ಗಾಳಿಯ ಹೆಜ್ಜೆಗಳು ನೆನಪು ತಂದವು.
ಹಸಿರಿನ ನಡುವೆ ಕಳೆದುಹೋದಾಗ,
ನನ್ನನ್ನೇ ನಾನು ಕಂಡುಕೊಂಡೆ ಆಗ.

ಪ್ರಕೃತಿಯ ಮೌನವೇ ಅಮೂಲ್ಯ ಗೀತೆ,
ಅದರೊಳಗಿದೆ ಬದುಕಿನ ಸಿಹಿ ನೀತಿ.
ಹಸಿರನ್ನು ಕಾಪಾಡೋಣ ಪ್ರೀತಿಯಿಂದ,
ಭೂಮಿಯನ್ನು ಉಳಿಸೋಣ ಜವಾಬ್ದಾರಿಯಿಂದ.

## ಕೋಳಬಾಳ ಪೊಲೀಸ್ ಪಾಟೀಲ್ ಕುಟುಂಬದಿಂದ ಕಾರುಣ್ಯಾಶ್ರಮದಲ್ಲಿ ಮಹಾಪ್ರಸಾದ ಸೇವೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಮಸ್ಕಿ ತಾಲೂಕಿನ ಕೋಳಬಾಳ ಪೊಲೀಸ್ ಪಾಟೀಲ್ ಕುಟುಂಬದ ಹಿರಿಯರಾದ ದಿ. ಶೇಖರಗೌಡ ಪೊಲೀಸ್ ಪಾಟೀಲ್ ಅವರ ಪುಣ್ಯಾರಾಧನೆ ಕಾರ್ಯಕ್ರಮದ ಸವಿ ನೆನಪಿನಲ್ಲಿ ಗದುಗಿನ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯರಾಧನೆ ಕಾರ್ಯಕ್ರಮವನ್ನು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮಗಳು ನೆರವೇರಿದವು.**




ಈ ಕಾರ್ಯಕ್ರಮಗಳಲ್ಲಿ ಕೋಳಬಾಳ ಪೊಲೀಸ್ ಪಾಟೀಲ್ ಕುಟುಂಬದ ರವಿಕುಮಾರಗೌಡ ನಾಡಗೌಡ್ರು ಜೀನೂರು ಸಾ. ಪೋತ್ನಾಳ ಹಾಗೂ ರಾಜೇಶ್ವರಿ ಗಂ. ಅಮರೇಗೌಡ ವಕೀಲರು ಕೋಳಬಾಳ ಸಿಂಧನೂರು ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ ಆಶೀರ್ವದಿಸಿದರು. ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಕೋಳಬಾಳ ಪೊಲೀಸ್ ಪಾಟೀಲ್ ಕುಟುಂಬದ ಹಿರಿಯರಾದ ದಿ. ಶೇಖರಗೌಡ ಇವರು ಅಗಲಿದ ಒಂದು ವರ್ಷದ ಸವಿ ನೆನಪಿನಲ್ಲಿ ಮತ್ತು ವಿಶೇಷವಾಗಿ ನಡೆದಾಡುವ ದೇವರಾದ ಗದುಗಿನ ಲಿಂ.ಪಂಡಿತ ಪುಟ್ಟರಾಜ ಗವಾಯಿಗಳ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಕಾರುಣ್ಯ ಆಶೀರ್ವಾದ ಎಲ್ಲಾ ಹಿರಿಯರು ಹಾಗೂ ವಯಸ್ಕರ ಬುದ್ಧಿಮಾಂದ್ಯರು ಶರಣ ಸ್ವರೂಪಿಗಳಿದ್ದಂತೆ ಇವರ ಸೇವೆ ಮಾಡುವುದೇ ನಮ್ಮ ಪೂರ್ವಜನ್ಮದ ಪುಣ್ಯ ಎಂದು ಗೋಳಬಾಳದ ಪೊಲೀಸ್ ಪಾಟೀಲ್ ಕುಟುಂಬ ತಮ್ಮ ಅನಿಸಿಕೆ ವ್ಯಕ್ತಪಡಿಸಿದಾಗ ಸಮಾಜದಲ್ಲಿ ಇಂತಹವರ ಸಹಾಯ ಸಹಕಾರದಿಂದಾಗಿ ಕಾರುಣ್ಯ ಆಶ್ರಮದ ಬದುಕು ಸಾಗುತ್ತಿದೆ ಸಮಾಜದ ಹಲವಾರು ಟೀಕೆ.ಟಿಪ್ಪಣಿ ಮತ್ತು ಸೇವಾ ಕರ್ತನಾದ ನನ್ನ ಬಗ್ಗೆ ಹಲವಾರು ಜನ ನೂರಾರು ಮಾತಾಡಿಕೊಳ್ಳುತ್ತಿದ್ದಾರೆ.

ಅದ್ಯಾವುದನ್ನು ನಾನು ಲೆಕ್ಕಿಸದೆ ನಾಡಿನ ನೊಂದ ಮನಸ್ಸುಗಳ ಸಮಾಜದಿಂದ ತಿರಸ್ಕೃತಗೊಂಡ ಹೃದಯಗಳ ಮಧ್ಯೆ ಆತ್ಮ ಅಕೋಳಬಾಳ ಪೊಲೀಸ್ ಪಾಟೀಲ್ ಕುಟುಂಬದ ಹಿರಿಯರಾದ ದಿವಂಗತ ಶೇಖರಗೌಡ ಅವರ ಆತ್ಮಕ್ಕೆ ಭಗವಂತ ನಿರಂತರ ಆತ್ಮ ಶಾಂತಿಯನ್ನು ಕರುಣಿಸಿ ಅವರ ಕುಟುಂಬಕ್ಕೆ ಹಿರಿಯರ ಅಗಲಿಕ್ಕೆ ನೋಬರಿಸುವಂತಹ ಶಕ್ತಿಯನ್ನು ಕರುಣಿಸಲಿ ಎನ್ನುವುದು ಕಾರುಣ್ಯ ಕುಟುಂಬದ ವಿಶೇಷ ಪ್ರಾರ್ಥನೆಯಾಗಿದೆ. ಮತ್ತು ಗದುಗಿನ ಅಂ–ಧ–ಅನಾಥರ ಬಾಳಿಗೆ ಬೆಳಕಾಗಿರುವ ಲಿಂ.ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಆಶೀರ್ವಾದ ನಾಡಿನ ಬಸವಾದಿ ಶರಣರ ಹರ ಗುರು ಶರಣಮೂರ್ತಿಗಳ ಆಶೀರ್ವಾದ ಸದಾ ಕಾಲ ಇರಲಿ ಎನ್ನುವುದು ಕಾರುಣ್ಯ ಕುಟುಂಬದ ನಿತ್ಯ ಪ್ರಾರ್ಥನೆಯಾಗಿದೆ ಎಂದು ಮಾತನಾಡಿ ಗೋಳಬಾಳ ಪೊಲೀಸ್ ಪಾಟೀಲ್ ಕುಟುಂಬದ ಎಲ್ಲಾ ಗುರು ಹಿರಿಯರುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಈ ಕಾರ್ಯಕ್ರಮದಲ್ಲಿ ಸರಸ್ವತಿ ಪೊ. ಪಾ. ಲಕ್ಷ್ಮಮ್ಮ ಪೊ.ಪಾ. ರವಿಕುಮಾರ ಗೌಡ ನಾಡಗೌಡ್ರು ಜಿನೂರು. ಅಮರೇಗೌಡ ವಕೀಲರು ಪೊ. ಪಾ. ರಾಜೇಶ್ವರಿ ಪೊ.ಪಾ. ರಾಜೇಶ್ವರಿ ಬಸನಗೌಡ ಪೊ. ಪಾ. ಮೇಘಾ ಪೊ.ಪಾ. ಶರಣಪ್ಪ ಪೊ.ಪಾ. ಹಾಗೂ ಹನುಮಂತಪ್ಪ ಕೋಳಬಾಳ ಡಿ.ಎಸ್. ಎಸ್.ಭೀಮ ಘರ್ಜನೆ ಅಧ್ಯಕ್ಷರು ಮಸ್ಕಿ ತಾಲೂಕ. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ.ಶರಣು ಸ್ವಾಮಿ ಬಸವ ಸ್ವಾಮಿ ಅನೇಕರು ಉಪಸ್ಥಿತರಿದ್ದರು.

## ಭಕ್ತಿಗೀತೆಯ ಆಲ್ಬಮ್ ಸಾಂಗ್ ಶೀಘ್ರ ಬಿಡುಗಡೆ

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರ: ಸಾಲು ಸಾಲು ಹಬ್ಬದ ಸಂಭ್ರಮದ ಪ್ರಯುಕ್ತ ಕೀರ್ತನ ಮೂವಿ ಮೇಕರ್ಸ್ ವತಿಯಿಂದ ನಾಡಿನ ಸಮಸ್ತ ಜನತೆಗೆ ಮೂರು ಮಹಾ ತಾಯಂದಿರ ಭಕ್ತಿಭಾವ ತುಂಬಿದ ವಿಶೇಷ ವಿಡಿಯೋ ಆಲ್ಬಮ್‌ಸಾಂಗ್ ಶೀಘ್ರದಲ್ಲೇ ಬಿಡುಗಡೆಯಾಗಲಿದೆ.**



ಶ್ರೀದೇವಿ ಎಲ್ಲಮ್ಮ, ಶ್ರೀದೇವಿ ಲಕ್ಷ್ಮಿ ಹಾಗೂ ಶ್ರೀದೇವಿ ದುರ್ಗೆ ಈ ಮೂರು ಮಹಾ ತಾಯಂದಿರ ಮಹಿಮೆ, ಶಕ್ತಿ ಹಾಗೂ ಭಕ್ತಿಭಾವವನ್ನು ಸಾರುವ ವಿಶೇಷ ಹಾಡುಗಳನ್ನು ಬೆಂಗಳೂರಿನ ಸುತ್ತಮುತ್ತಲಿನ ವಿವಿಧ ಪ್ರದೇಶಗಳಲ್ಲಿ ಸತತ ಐದು ದಿನಗಳ ಚಿತ್ರೀಕರಣ ನಡೆಸಲಾಗಿದ್ದು ಮೂರು ದೇವತೆಗಳ ಪಾತ್ರಗಳಲ್ಲಿ ಕಿರುತೆರೆ ಮತ್ತು ಚಲನಚಿತ್ರ ಕಲಾವಿದೆ ಸುನಂದಾ ಕಲ್ಬುರ್ಗಿ, ನಮ್ರುತ.ಎನ್. ಕುಲಕರ್ಣಿ ಹಾಗೂ ಶ್ರೀಮತಿ ಗೀತಾ ವೆಂಕಟೇಶ್ ಅವರುಗಳು ಅಭಿನಯಿಸಿದ್ದಾರೆ. ಛಾಯಾಗ್ರಹಣ ಬೆಟ್ಟೇಗೌಡ ಕಿಲಾರ, ಸಾಹಿತ್ಯ ಲೋಕೇಶ್ ವಿದ್ಯಾಧರ, ನಾರಾಯಣ್, ಸಂಗೀತ ಎಸ್.ಕೆ. ಸಾಯಿ ಶ್ಯಾಮ್ (ರಿದಂ ಕುಟ್ಟಿ), ಅನಿತಾ ನಾರಾಯಣ ಕುಲಕರ್ಣಿ ಹಿನ್ನೆಲೆ ಗಾಯನ, ನೃತ್ಯ ಸಂಯೋಜನೆ ಶ್ರೀಮತಿ ಶಾಂತಿ ಹಾಗೂ ದೀಪಾ, ವರ್ಣಾಲಂಕಾರ, ಕೇಶಾಲಂಕಾರ :ಪಲ್ಲವಿ ಸಹಾಯ ಭಾಗ್ಯಮ್ಮ, ವಸ್ತ್ರಾಲಂಕಾರ ರೋಹಿತ್, ಸಂಕಲನ ಯುವರಾಜ್, ಡಿ.ಐ ಜೀವನ್, ಪತ್ರಿಕಾ ಸಂಪರ್ಕ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ, ನಿರ್ದೇಶನ ಹಾಗೂ ನಿರ್ಮಾಣದ ಹೊಣೆ ಚಲನಚಿತ್ರ ನಿರ್ದೇಶಕ,ನಿರ್ಮಾಪಕ ಲೋಕೇಶ್ ವಿದ್ಯಾಧರ ಹೊತ್ತಿದ್ದಾರೆ. ನಾಡಿನ ಸಂಸ್ಕೃತಿ ಮತ್ತು ಭಕ್ತಿಯ ಸೊಗಡನ್ನು ಜನಮನಗಳಿಗೆ ತಲುಪಿಸುವ ಉದ್ದೇಶದಿಂದ ಮೂಡಿಬರುತ್ತಿರುವ ಈ ವಿಶೇಷ ವಿಡಿಯೋ ಆಲ್ಬಮ್ ಸಾಂಗ್ ಸದ್ಯದಲ್ಲೇ ಬಿಡುಗಡೆಯಾಗಲಿದ್ದು ನಾಡಿನ ಸಮಸ್ತ ಜನರ ಆಶೀರ್ವಾದ, ಪ್ರೋತ್ಸಾಹ ಹಾಗೂ ಬೆಂಬಲವನ್ನು ಕೀರ್ತನ ಮೂವಿ ಮೇಕರ್ಸ್ ಕೋರಿದೆ.
–ಡಾ.ಪ್ರಭು ಗಂಜಿಹಾಳ

## ಶಿವನಗೌಡ ಹಾಗೂ ಹನುಮೇಶ್ ನಾಯಕ ಹತ್ಯೆ ಪ್ರಕರಣ: ಆರೋಪಿಗಳಿಗೆ ಉಗ್ರ ಶಿಕ್ಷೆಗೆ ಆಗ್ರಹ, ಸಿಎಂಗೆ ಮನವಿ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ರಾಂಪುರ–ಭೂಪುರ ಗ್ರಾಮದ ಶಿವನಗೌಡ ನಾಯಕ ಹಾಗೂ ಮಾನ್ವಿ ತಾಲೂಕಿನ ಹನುಮೇಶ್ ನಾಯಕ ಹತ್ಯೆ ಪ್ರಕರಣಗಳ ಆರೋಪಿಗಳಿಗೆ ಉಗ್ರ ಶಿಕ್ಷೆ ವಿಧಿಸಬೇಕು ಹಾಗೂ ಮೃತರ ಕುಟುಂಬಗಳಿಗೆ ಸರ್ಕಾರಿ ಸೌಲಭ್ಯಗಳನ್ನು ನೀಡಬೇಕು ಎಂದು ಕರ್ನಾಟಕ ರಾಜ್ಯ ಬೇಡರ ಸಮಿತಿ (ರಿ) ಹಾಗೂ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಜಿಲ್ಲಾ ಘಟಕ ರಾಯಚೂರು ಸಮಸ್ತ ವಾಲ್ಮೀಕಿ ಸಮುದಾಯದ ವತಿಯಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಮಾನ್ಯ ತಹಸಿಲ್ದಾರ್ ಭೀಮರಾಯ ರಾಮಸಮುದ್ರ ಮೂಲಕ ಮನವಿ ಸಲ್ಲಿಸಲಾಯಿತು.**

ಮನವಿಯಲ್ಲಿ, ಶಿವನಗೌಡ ನಾಯಕ ಅವರು ಗಣೇಶ ವಿಗ್ರಹ ವೀಕ್ಷಣೆಗೆ ತೆರಳಿದ್ದ ವೇಳೆ ಕೆಲವರು ಮಾರಣಾಂತಿಕ ಹಲ್ಲೆ ನಡೆಸಿ ಹತ್ಯೆ ಮಾಡಿರುವುದಾಗಿ ಹಾಗೂ ಮೃತರ ಪತ್ನಿ ಬಾಣಂತಿಯಾಗಿದ್ದು, ಕುಟುಂಬ ಸಂಕಷ್ಟದಲ್ಲಿದೆ ಎಂದು ಉಲ್ಲೇಖಿಸಲಾಗಿದೆ. ಅದೇ ರೀತಿ, ಮಾನ್ವಿ ತಾಲೂಕಿನ ಸಂಗಾಪುರ ರಸ್ತೆಯ ಅಲ್ಲಾ ಓಲಿ ಕಾಲೋನಿಯ ಹನುಮೇಶ ನಾಯಕ ಅವರನ್ನು ಅವರ ಮನೆಯಲ್ಲಿ ಊಟ ಮಾಡುತ್ತಿದ್ದ ವೇಳೆ ಹರಿತವಾದ ಆಯುಧಗಳಿಂದ ಹತ್ಯೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ಈ ಪ್ರಕರಣದಲ್ಲಿ ಸಾಮಾಜಿಕ ಜಾಲತಾಣದಲ್ಲಿ ವಿಕೃತ ವಿಡಿಯೋ ಹರಡಿರುವುದನ್ನೂ ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ. ಯುವಕರಲ್ಲಿ ಹೆಚ್ಚುತ್ತಿರುವ ಮಾದಕ ವಸ್ತುಗಳ ವ್ಯಸನ ಹಾಗೂ ಅಕ್ರಮ ಮದ್ಯ ಮಾರಾಟದಿಂದ ಇಂತಹ ಘಟನೆಗಳು ಹೆಚ್ಚುತ್ತಿದ್ದು, ಅಬಕಾರಿ ಮತ್ತು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ. ಮನವಿಯಲ್ಲಿ ಮೃತರ ಕುಟುಂಬಗಳಿಗೆ ತಲಾ ಒಂದು ಸರ್ಕಾರಿ ಉದ್ಯೋಗ, 5 ಎಕರೆ ಕೃಷಿ ಭೂಮಿ ಹಾಗೂ ತಲಾ 4 ಕೋಟಿ ಪರಿಹಾರ ನೀಡಬೇಕು. ಎರಡೂ ಹತ್ಯೆ ಪ್ರಕರಣಗಳನ್ನು ವಿಚಾರಣೆ ನಡೆಸಿ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಲಾಗಿದೆ.

ಬೇಡಿಕೆಗಳು ಈಡೇರದಿದ್ದರೆ ರಾಯಚೂರು ಜಿಲ್ಲೆಯಾದ್ಯಂತ ವಾಲ್ಮೀಕಿ ಸಮುದಾಯದ ವತಿಯಿಂದ ಉಗ್ರ ಹೋರಾಟ ನಡೆಸಲಾಗುವುದು ಎಂದು ಮನವಿಯಲ್ಲಿ ಎಚ್ಚರಿಕೆ ನೀಡಲಾಗಿದೆ.ಈ ಸಂದರ್ಭದಲ್ಲಿಕರ್ನಾಟಕ ರಾಜ್ಯ ಬೇಡರ ಸಮಿತಿ (ರಿ.)ಬೆಂಗಳೂರು, ರಾಜ್ಯಾಧ್ಯಕ್ಷರಾದ ಅಂಬಣ್ಣ ನಾಯಕ ಗುಜ್ಜಲ್ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ಜಿಲ್ಲಾಧ್ಯಕ್ಷರಾದ ರಾಮಣ್ಣ ನಾಯಕ, ತಾಲೂಕ ಪ್ರಧಾನ ಕಾರ್ಯದರ್ಶಿಯಾದ ಕೊಂಡಯ್ಯ ನಾಯಕ,ಮಾನವ ಬಂಧುತ್ವ ವೇದಿಕೆ ಸಂಚಾಲಕರಾದ ಶಿವರಾಜ ನಾಯಕ ಹರವಿ, ಆಂಜನೇಯ ನಸಲಾಪುರ ಜೆಲ್ಲಿ ಆಂಜನೇಯ್ಯ ನೀರಮಾನ್ವಿ, ತಿಮ್ಮಯ್ಯ ನಾಯಕ ಮದ್ಲಾಪುರ,ರಮೇಶ ನಾಯಕ ಕಪಗಲ್,ಯಲ್ಲಯ್ಯ ನಾಯಕ. ರಾಜಾ ನಾಯಕ ಹನುಮೇಶ ನಾಯಕ ಇನ್ನು ಕೆಲವರು ಉಪಸ್ಥಿತರಿದ್ದರು.



## ಸ್ವಚ್ಛತೆ ಹೀ ಸೇವಾ ಅಭಿಯಾನ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಮೀಪದ ಆರ್. ಎನ್. ನಗರ ಕ್ಯಾಂಪ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ವತಿಯಿಂದ ಸ್ವಚ್ಛತೆ ಹೀ ಸೇವಾ ಅಭಿಯಾನ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಸ್ವಚ್ಛತೆ ಹೀ ಸೇವಾ ಅಭಿಯಾನವು ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ನಡೆಯಲಿದ್ದು, ಸಾರ್ವಜನಿಕರಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಶ್ರಮದಾನದ ಮೂಲಕ ತ್ಯಾಜ್ಯ ವಿಲೇವಾರಿ, ಸಾರ್ವಜನಿಕ ಸ್ಥಳಗಳು, ಶಾಲೆಗಳು ಹಾಗೂ ಕಚೇರಿಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸ್ವಚ್ಛತೆಯಿಂದ ಆರೋಗ್ಯದ ಗುಣಮಟ್ಟ ಹೆಚ್ಚುವುದರಿಂದ ಪ್ರತಿಯೊಬ್ಬರೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಇದೇ ವೇಳೆ ಸ್ವಚ್ಛತೆಗಾಗಿ ಪ್ರತಿಯೊಬ್ಬರೂ 100 ಗಂಟೆಗಳನ್ನು ಮೀಸಲಿಡುವ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನಂತರ ಮಾತನಾಡಿದ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ನಿಂಗಮ್ಮ ಅವರು, ಮಹಾತ್ಮ ಗಾಂಧೀಜಿಯವರು ಕಂಡ ಸ್ವಚ್ಛ ಭಾರತದ ಕನಸನ್ನು ನನಸು ಮಾಡಲು ಪ್ರತಿಯೊಬ್ಬರೂ ಸ್ವಚ್ಛತಾ ಸೇವಾ ಪ್ರತಿಜ್ಞೆಯನ್ನು ಸ್ವೀಕರಿಸಬೇಕು ಎಂದು ತಿಳಿಸಿದರು. ನಾನು ನನ್ನ ಮನೆ, ಶಾಲೆ, ಕಚೇರಿ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುತ್ತೇನೆ, ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ನಿಗದಿತ ಸ್ಥಳದಲ್ಲೇ ವಿಲೇವಾರಿ ಮಾಡುತ್ತೇನೆ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳುತ್ತೇನೆ ಹಾಗೂ ಇತರರಲ್ಲೂ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುತ್ತೇನೆ, ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸುತ್ತೇನೆ ಮತ್ತು ಸ್ವಚ್ಛ ಭಾರತ ನಿರ್ಮಾಣಕ್ಕೆ ನನ್ನಿಂದಾಗುವ ಸಂಪೂರ್ಣ ಸಹಕಾರ ನೀಡುತ್ತೇನೆ ಎಂಬ ಪ್ರತಿಜ್ಞಾವಿಧಿಯನ್ನು ಬೋಧಿಸಿ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆ ಮಾಲಾಶ್ರೀ, ಅಂಗನವಾಡಿ ಕಾರ್ಯಕರ್ತೆ ಈರಮ್ಮ, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕೇಂದ್ರ–ರಾಜ್ಯ ಸರ್ಕಾರಗಳಿಂದ ಅಂಗನವಾಡಿ ನೌಕರರ ಕಡೆಗಣನೆ: ಕಂಪ್ಲಿಯಲ್ಲಿ ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮೀ ಆಕ್ರೋಶ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕೇಂದ್ರ ಮತ್ತು ರಾಜ್ಯ ಸರ್ಕಾರ ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಸಹಾಯಕರಿಗೆ ಅನ್ಯಗತ್ಯ ಕೆಲಸ ನೀಡಿ ಅಂಗನವಾಡಿ ಕೇಂದ್ರದ ಗುಣಮಟ್ಟ ಕಡಿಮೆ ಮಾಡಲು ಹೊರಟಿವೆ.**

ಆದ್ರಿಂದ ಕೂಡಲೇ ಹೆಚ್ಚುವರಿ ಕೆಲಸದಿಂದ ಮುಕ್ತಿ ನೀಡಿ, ಅಂಗನವಾಡಿಯಲ್ಲೇ ಸೇವೆ ಮಾಡಲು ಅನುವು ಮಾಡಿಕೊಡಬೇಕು ಮತ್ತು ಇಲ್ಲಿನ ಕಾರ್ಯಕರ್ತೆಯರ, ಸಹಾಯಕಿಯರ ಬಹು ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ(ಸಿಐಟಿಯು)ದ ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮೀ ಹೇಳಿದರು. ಪಟ್ಟಣದ ಶಿಬಿರದಿನ್ನಿ(ಮಾರುತಿ ನಗರ)ಯ ಪುರಸಭೆ ಸಮುದಾಯ ಭವನದಲ್ಲಿ ಅಂಗನವಾಡಿ ನೌಕರರ ಖಾಯಂಮಾತಿ ಮತ್ತು ಕನಿಷ್ಠ ವೇತನ ವ್ಯಾಪ್ತಿಗೆ ತರುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸಿಐಟಿಯು)ದ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲಾ 10ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ಹಲವು ವರ್ಷಗಳಿಂದ ಅಂಗನವಾಡಿ ಕೇಂದ್ರದ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾ ಬಂದಿರುವ ಅಂಗನವಾಡಿ ನೌಕರರನ್ನು ಖಾಯಂಗೊಳಿಸಿ, ಕನಿಷ್ಠ ನೀಡಬೇಕು. ಅನೇಕ ವರ್ಷಗಳಿಂದ ಅಂಗನವಾಡಿ ಕೇಂದ್ರ ಉಳಿವಿಗಾಗಿ ಮತ್ತು ಮಕ್ಕಳ ಪೌಷ್ಠಿಕತೆ ಜೊತೆಗೆ ಶಿಕ್ಷಣ ನೀಡುತ್ತಾ ಬರಲಾಗಿದೆ. ಆದರೆ, ರಾಜ್ಯ, ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತರನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಕೇಂದ್ರದ ಅನುದಾನ ಹೆಚ್ಚಳವಾಗಿಲ್ಲ. ಮತ್ತು ಮಕ್ಕಳಿಗೆ ಅನುದಾನದ ಕೊರತೆ ಕಾಡುತ್ತಿದೆ. ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸಬೇಕು. ಸದೃಢ ಪ್ರಜಾಪ್ರಭುತ್ವ ಕಟ್ಟುವಲ್ಲಿ ಅಂಗನವಾಡಿ ಕೇಂದ್ರಗಳ ಪಾತ್ರ ದೊಡ್ಡದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಮಕ್ಕಳಿಗೆ ನೀಡುತ್ತಿರುವ ಪೌಷ್ಠಿಕ ಆಹಾರ, ಅನುದಾನ ಸಮರ್ಪಕವಾಗಿ ಒದಗಿಸುತ್ತಿಲ್ಲ. ಆದ್ದರಿಂದ ಡಿಸೆಂಬರ್ 1ರಂದು ದೆಹಲಿ ಚಲೋ ಬೃಹತ್ ಪ್ರತಿಭಟನಾ ಹೋರಾಟಕ್ಕೆ ಸಜ್ಜಾಗಿದ್ದೇವೆ. ಕೇಂದ್ರದ ನಡೆ ಖಂಡಿಸಿ ಚಳುವಳಿಗೆ ನಾಂದಿಯಾಗುವ ಮೂಲಕ ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಲಾಗುವುದು ಎಂದರು.

ಇಲ್ಲಿನ ಸಮ್ಮೇಳನದಲ್ಲಿ ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳನ್ನು ಆಲಿಸಿ ಮುಂದಿನ ಹೋರಾಟದ ದಿಟ್ಟ ಹೆಜ್ಜೆಯೊಂದಿಗೆ ಬೃಹತ್ ಹೋರಾಟಕ್ಕೆ ಮುನ್ನುಡಿ ಬರೆಯೋಣ ಎಂಬ ಸುದೇಶದ ಜೊತೆಗೆ ಅಂಗನವಾಡಿ ಕೇಂದ್ರದ ಮೂಲಭೂತ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ಸತ್ಯಬಾಬು, ಜಿಲ್ಲಾಧ್ಯಕ್ಷ ಹೆಚ್.ತಿಪ್ಪಯ್ಯ, ಅಂಗನವಾಡಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಉಮಾದೇವಿ, ಕಾರ್ಯದರ್ಶಿ ಎ.ಮಲಮ್ಮ, ಹಮಾಲರ ಸಂಘದ ಅಧ್ಯಕ್ಷ ಓಬಳೇಶ, ಫೆಡರೇಶನ್ ಆಫ್ ಕರ್ನಾಟಕ ಆಟೋ ರಿಕ್ಷಾ ಡ್ರೈವರ್ಸ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಸಂತೋಷಕುಮಾರ.

ಸಿಐಟಿಯು ಗೌರವಾಧ್ಯಕ್ಷ ಬಂಡಿ ಬಸವರಾಜ, ಅಂಗನವಾಡಿ ನೌಕರರ ಸಂಘದ ಕಂಪ್ಲಿ ತಾಲೂಕು ಅಧ್ಯಕ್ಷ ಬಿ.ಕೆ.ಉಮಾದೇವಿ, ಕಾರ್ಯದರ್ಶಿ ತಿಪ್ಪಮ್ಮ, ಖಜಾಂಜಿ ಅನುರಾದ, ಶಾಂತ, ಸಹ ಕಾರ್ಯದರ್ಶಿಗಳಾದ ನಾಜೀರಾ, ನಾಗಮ್ಮ ಮುಖಂಡೆ ಜೈರಾಬೀ, ಕಟ್ಟಡ ಕಾರ್ಮಿಕ ಸಂಘಟನೆಯ ಜಿಲ್ಲಾ ಸಂಚಾಲಕ ಎಲ್. ಹೊನ್ನೂರಸಾಬ್, ಮುಖಂಡ, ನಾಗರಾಜ ಸೇರಿದಂತೆ ಅಂಗನವಾಡಿ ಕಾರ್ಯಕರ್ತಯರು. ಸಹಾಯಕರಿಯರು ಉಪಸ್ಥಿತರಿದ್ದರು.



## ನೇಮಕಾತಿ ಪ್ರಕಟಣೆ

**NCL ನೇಮಕಾತಿ 2026 – 40 ವೈದ್ಯಕೀಯ ಸಲಹೆಗಾರ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 21, 2026**

NCL ನೇಮಕಾತಿ 2026: 40 ವೈದ್ಯಕೀಯ ಸಲಹೆಗಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ನಾರ್ದರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್ (NCL) ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಸಲಹೆಗಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಸಿಂಗ್ರೌಲಿ (ಮಧ್ಯಪ್ರದೇಶ) ಪ್ರದೇಶದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 05–ಅಕ್ಟೋಬರ್–2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: nclcil.in

## ಸಹಕಾರ ಸಂಘಕ್ಕೆ ಸುಮಾರು 33.05 ಲಕ್ಷ ನಿವ್ವಳ ಲಾಭ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದ ಎಸ್‌ಎನ್ ಪೇಟೆಯ ಶ್ರೀ ರಾಘವೇಂದ್ರ ಶಾಖಾ ಮಠದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ವಿಕಾಸ ಕ್ರೆಡಿಟ್ ಅಂಡ್ ಮಲ್ಟಿಪರ್ಪಸ್ ಸಹಕಾರ ಸಂಘದ 13ನೇ ವಾರ್ಷಿಕ ಮಹಾಜನ ಸಭೆ ಸಹಕಾರ ಸಂಘದ ಅಧ್ಯಕ್ಷ ಎಂ.ಗೋವರ್ಧನ ಅಧ್ಯಕ್ಷತೆವಹಿಸಿ ಮಾತನಾಡಿ,**



ಸಣ್ಣ ಮಟ್ಟದಲ್ಲಿ 5.50 ಲಕ್ಷ ಬಂಡವಾಳದೊಂದಿಗೆ ಸಹಕಾರ ಸಂಘವನ್ನು 13 ವರ್ಷದ ಹಿಂದೆ ಸ್ಥಾಪಿಸಿ, ಉದ್ಯೋಗ ಸೃಷ್ಟಿಸಿ, ಗ್ರಹಕ–ರಿಗೆ ಸಾಲ ಸೌಲಭ್ಯ ಕಲ್ಪಿಸುತ್ತಾ, ಪ್ರತಿಯೊಬ್ಬರ ಸಹಕಾರದೊಂದಿಗೆ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಕಂಪ್ಲಿ ಪಟ್ಟಣದಲ್ಲಿ ಕೇಂದ್ರ ಕಛೇರಿ ಆರಂಭಿಸಿ, ಈಗ ಗಂಗಾವತಿ, ಕುರುಗೋಡು, ಸಿರಿಗೇರಿ, ಬಳ್ಳಾರಿ, ಕರೂರು ಮತ್ತು ಹೊಸಪೇಟೆ ನಗರದಲ್ಲಿ ತನ್ನ ಶಾಖೆಗಳನ್ನು ಹೊಂದಿದ್ದು, ಅಲ್ಲಿ ಕೂಡ ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಸಂಘದ ಸದಸ್ಯರು, ಸಾರ್ವಜನಿಕರು ಉತ್ತಮ ಸಹಕಾರ ನೀಡುತ್ತಿದ್ದಾರೆ ಎಂದು ತಿಳಿಸಿದರು. ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಬಿ.ಕೆ.ಅಶೋಕ ಕುಮಾರ್ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಹಕಾರ ಸಂಘವು 3509 ಸದಸ್ಯರನ್ನು ಹೊಂದಿದ್ದು, 1,84,35,500 ರೂ.ಗಳ ಷೇರು ಬಂಡವಾಳ ಹೊದಿದೆ. ಸುಮಾರು 25,21,24,131 ರೂ.ಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ ಸಾಲದ ರೂಪದಲ್ಲಿ ವಿತರಿಸಲಾಗಿದೆ. ಸಂಘವು ಸುಮಾರು 33.05ಲಕ್ಷ ನಿವ್ವಳ ಲಾಭಗಳಿಸಿದೆ. ಮತ್ತು ಸಂಘದ ಸದಸ್ಯರಿಗೆ ಶೇ.11 % ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ ಎಂದರು. ನಂತರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬಿ.ಮಲ್ಲಪ್ಪ, ನಿರ್ದೇಶಕರಾದ ಹೂವಣ್ಣ, ಎರೆಪ್ಪ, ಹನುಮಂತಪ್ಪ ಎನ್, ವೇಣುಗೋಪಾಲ್ ಎಂ, ಶೇಷಗಿರಿ ಆಚಾರ್ ಜೆ, ಮಲ್ಲಿಕಾರ್ಜುನ ಡಿ, ತಿಮ್ಮಪ್ಪ ಯು, ಶಿವಶಂಕ್ರಪ್ಪ ಕೆ, ಸತೀಶ್ ರಾಯ್ಕರ್, ಗಾದಿಲಿಂಗ ಬಿ, ಹೇಮಾವತಿ ಎಂ, ಉಮಾದೇವಿ ಬಿ, ಖಾಸಿಂಬೀ ಎನ್, ರಾಜಮ್ಮ ಎಚ್, ಸರಸ್ವತಿ ಎಚ್, ಪೂರ್ಣಿಮಾ ಜಿ ಮತ್ತು ಪುಷ್ಪಲತಾ ಗೌಡ ಇ ಹಾಗು ಸಿಬ್ಬಂದಿಗಳಾದ ವ್ಯವಸ್ಥಾಪಕ ಎಂ. ಬಿ.ಆಂಜಿನೇಯ, ಸಿಬ್ಬಂದಿಗಳಾದ ಮೈಬೂಬ್ ಪಾಷ ಡಿ, ಮಂಜುನಾಥ ಕೆ, ಸಚಿನ್ ಯು ಟಿ ಮತ್ತು ಸುಮಲತಾ ಡಿ ಸೇರಿದಂತೆ ಮುಖಂಡರು, ಗ್ರಹಕರು ಪಾಲ್ಗೊಂಡಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಹಾವು ಕಡಿತಕ್ಕೆ ಸಮಯಕ್ಕೆ ಸರಿಯಾದ ವೈಜ್ಞಾನಿಕ ಚಿಕಿತ್ಸೆಯೇ ಜೀವ ರಕ್ಷೆ: ಶ್ರೀಮತಿ ಗೀತಾ ಹಿರೇಮಠ್

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕಾ ಆರೋಗ್ಯ ಅಧಿಕಾ–ರಿಗಳ ಕಾರ್ಯಾಲಯ ಸಿಂಧನೂರ, ಹಾಗೂ ಶ್ರೀ ಬಸವ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಅಂಡ್ ಪ್ಯಾರಾಮೆಡಿಕಲ ಸೈನ್ಸ್ ಕಾಲೇಜು ಸಿಂಧನೂರು ಇವರ ಸಯುಕ್ತ ಆಶ್ರಯದಲ್ಲಿ**

" ಅಂತರ್ರಾಷ್ಟ್ರೀಯ ಹಾವು ಕಡಿತ ಜಾಗೃತಿ ದಿನ " ಸದರಿ ಕಾರ್ಯಕ್ರಮವನ್ನು ಉದ್ದೇಶಿಸಿ ಶ್ರೀಮತಿ ಗೀತಾ ಹಿರೇಮಠ್ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ, ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಇವರು ಮಾತನಾಡಿ ಪ್ರತಿ ವರ್ಷ ಸೆಪ್ಟೆಂಬರ್ 19 ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಗ್ರಾಮೀಣ ಭಾಗಗಳಲ್ಲಿ ಮತ್ತು ಬಡ ಸಮುದಾಯಗಳಲ್ಲಿ ಅತಿ ದೊಡ್ಡ ಆರೋಗ್ಯ ಬಿಕ್ಕಟ್ಟಾಗಿರುವ ಹಾವು ಕಡಿತದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಈ ವರ್ಷದ (2026) ಜಾಗತಿಕ ವಿಷಯವು ಹಾವು ಕಡಿತದಿಂದ ಉಂಟಾಗುವ ದೈಹಿಕ ನರ ವೈಜ್ಞಾನಿಕ ಮತ್ತು ಮಾನಸಿಕ ಸಾಮರ್ಥ್ಯಗಳ ಮೇಲಿನ ಜಾಗೃತಿಗೆ ಹೆಚ್ಚಿನ ಒತ್ತು ನೀಡಿದೆ. ಹಾವು ಕಡಿತದ ಸಂದರ್ಭದಲ್ಲಿ ಅನುಸ–ರಿಸಬೇಕಾದಂತ ಕ್ರಮಗಳು ಹಾವು ಕಚ್ಚಿದಾಗ ತಕ್ಷಣ ಪ್ರಥಮ ಚಿಕಿತ್ಸೆ ಮಾಡಿಕೊಳ್ಳಬೇಕು.

ಆತಂಕಕ್ಕೆ ಒಳಗಾಗದೆ ಆತಂಕದಿಂದ ರಕ್ತ ಪರಿಚಲನೆ ಹೆಚ್ಚಿ ವಿಷ ದೇಹದಲ್ಲಿ ವೇಗವಾಗಿ ಹರಡಬಹುದು ಕಚ್ಚಿದ ಜಾಗದಲ್ಲಿ ಊತ ಬರುವ ಸಾಧ್ಯತೆ ಇರುವುದ–



ರಿಂದ ಉಂಗುರ ವಾಚ್ ಅಥವಾ ಬೆಲ್ಟ ಬಿಗಿಯಾದ ಬಟ್ಟೆಗಳನ್ನು ತಕ್ಷಣವೇ ತಡಿಲಗೊಳಿಸಿ ಕಚ್ಚಿದ ಭಾಗವನ್ನು ಒಣ ಹಾಗೂ ಶುದ್ಧವಾದ ಬಟ್ಟೆಯಿಂದ ದೂರವಾಗಿ ಮುಚ್ಚಿ ತಕ್ಷಣ ಆಸ್ಪತ್ರೆಗೆ ಧಾವಿಸಿ ಯಾವುದೇ ವಿಳಂಬವಿಲ್ಲದೆ ಹತ್ತಿರದ ಸರ್ಕಾರಿ ಅಥವಾ ಸುಸಜ್ಜಿತ ಆಸ್ಪತ್ರೆಗೆ ರೋಗಿಯನ್ನು ಕರೆದೊಯಬೇಕು ಪ್ರತಿ ವಿಷ (ಚಿಟಣು –ತಜಟಿಠಟ) ಮಾತ್ರ ಹಾವು ಕಡಿತಕ್ಕೆ ಇರುವ ಏಕೈಕ ವೈಜ್ಞಾನಿಕ ಚಿಕಿತ್ಸೆಯಾಗಿದೆ. ಹಾವು ಕಚ್ಚಿದ ಹಾವಿನ ಪ್ರಕಾರ (ವಿಷಪೂರಿತ ಅಥವಾ ವಿಷರಹಿತ) ಮತ್ತು ವಿಷದ ತೀವ್ರತೆಯ ಮೇಲೆ ಆಧಾರವಾಗಿರುತ್ತದೆ.

ವಿಷಪೂರಿತ ಹಾವು ಕಚ್ಚಿದಾಗ ಚರ್ಮದ ಮೇಲೆ ಸಾಮಾನ್ಯವಾಗಿ ಎರಡು ಸ್ಪಷ್ಟವಾದ ಚುಚ್ಚಿದ ಗಾಯದ ಗುರುತುಗಳು ಕಾಣಿಸುತ್ತದೆ ತೀವ್ರ ನೋವು ಮತ್ತು ಉರಿ ಕಚ್ಚಿದ ತಕ್ಷಣ ಆ ಜಾಗದಲ್ಲಿ ವಿಷಪೂರಿತ ನೋವು ಅಥವಾ ಉರಿ ಸಂವೇದನೆ ಉಂಟಾಗುತ್ತದೆ ಕಚ್ಚಿದ ಜಾಗದ ಸುತ್ತಲೂ ವೇಗವಾಗಿ ಊತ ಕಾಣಿಸಿಕೊಳ್ಳುತ್ತದೆ ಮತ್ತು ಚರ್ಮ ಕೆಂಪಾಗಿರುತ್ತದೆ ಗಾಯದಿಂದ ನಿರಂತರವಾಗಿ ರಕ್ತ ಸೋರಬಹುದು. ಹೊಟ್ಟೆ ತೊಳೆಸುವುದು ಮತ್ತು ವಾಂತಿ ಮಾಡುವುದು ವಿಷ ಹರಡುತ್ತಿರುವುದ–ರಿಂದ ಮೊದಲ ಸೂಚನೆಗಾಳಗಿವೆ . ಉಸಿರಾಡಲು ಕಷ್ಟವಾಗುವುದು ಅಥ–'ವಾ ಉಸಿರು ಕಟ್ಟಿದಂತಾಗುವುದು ಕಣ್ಣುಗಳು ಸರಿಯಾಗಿ ಕಾಣಿಸದಿರುವುದು ಕಣ್ಣಿನ ರೆಪ್ಪೆಗಳು ಜಾರಿ ದಂತಾಗುವುದು ಮುಖ, ಕೈ ಅಥ–'ವಾ ಕಾಲುಗಳಲ್ಲಿ ಜುಮುಜುಮು ಅನಿಸುವುದು ಅಥವಾ ಮರಗಟ್ಟುವುದು ಅತಿಯಾಗಿ ಬೆವರು ಮತ್ತು ಬಾಯಿಯಲ್ಲಿ ಜೊಲ್ಲು(ಲಾಲಾರಸ ) ಹೆಚ್ಚಾಗಿ ಉತ್ಪತ್ತಿಯಾಗುವುದು. ತಲೆನೋವು ತಲೆ ತಿರುಗುವಿಕೆ ಅಥವಾ ವ್ಯಕ್ತಿ ಪ್ರಜ್ಞೆ ತಪ್ಪುವುದು ಈ ಲಕ್ಷಣಗಳು ಕಂಡುಬರುತ್ತವೆ.

ಹಾವು ಕಡಿದ ಸಂದರ್ಭದಲ್ಲಿ ಯಾವ ತಪ್ಪುಗಳನ್ನು ಮಾಡಬಾರದು ನಾಟಿಮದ್ದು ಅಥವಾ ಮಂತ್ರ ತಂತ್ರ ಬೇಡ ನಾಟಿವೈದ್ಯರ ಅಥವಾ ಮಂತ್ರವಾದಿಗಳ ಬಳಿ ಹೋಗಿ ಸಮಯ ವ್ಯರ್ಥ ಮಾಡಬೇಡಿ ಗಾಯವನ್ನ ಕತ್ತ–ರಿಸಬೇಡಿ ಅಥವಾ ಚರ್ಮವನ್ನು ಬ್ಲೇಡಿನಿಂದ ಕತ್ತರಿಸುವುದು ಅಥವಾ ಬಾಯಿಯಿಂದ ವಿಷಯವನ್ನು ಇರಲು ಪ್ರಯತ್ನಿಸುವುದು ತೀರಾ ಅಪಾಯಕಾರಿ ಐಸ್ ಅಥವಾ ಗಟ್ಟಿ ಗಂಟು ಬೇಡ ಕಚ್ಚಿದ ಜಾಗಕ್ಕೆ ಐಸಿಡಬೇಡಿ ರಕ್ತ ಸಂಚಾರ ಸಂಪೂರ್ಣ ಸ್ಥಗಿತಗೊಳ್ಳುವಂತೆ ಅತಿಯಾದ ಬಿಗಿಯಾದ ಟೂರ್ನಿಕೇಟ್(ಬಂದಕ) ಕಟ್ಟಬೇಡಿ ಮುನ್ನಚೆರಿಕೆ ಕ್ರಮಗಳು ರಾತ್ರಿ ವೇಳೆ ಓಡಾಡುವಾಗ ಕಡ್ಡಾಯವಾಗಿ ಟಾರ್ಚ್ ಲೈಟ್ ಬಳಸಿ ಮನೆಯ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಿ ಇದರಿಂದ ಹಾವುಗಳು ಅಡಗಿಕೊಳ್ಳಲು ಜಾಗ ಸಿಗುವುದಿಲ್ಲ ಶೂ ಅಥವಾ ಚಪ್ಪಲಿಗಳನ್ನು ಧರಿಸುವ ಮುನ್ನ ಅವುಗಳನ್ನು ಒಮ್ಮೆ ಚೆನ್ನಾಗಿ ಪರಿಶೀಲಿಸಿ ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಜಗತ್ತಿನಲ್ಲಿ ಪ್ರತಿ ವರ್ಷ1.40 ಲಕ್ಷ ಜನರು ಹಾವು ಕಡಿತದಿಂದ ಜೀವ ಕಳೆದುಕೊಳ್ಳುತ್ತಿದ್ದು ಅದರಲ್ಲಿ ಭಾರತದಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಮೃತಪಡುತ್ತಿದ್ದಾರೆ.

ಸರಿಯಾದ ಸಮಯದಲ್ಲಿ ಸಿಗುವ ವೈದ್ಯಕೀಯ ಚಿಕಿತ್ಸೆಯು ಜೀವವನ್ನು ಉಳಿಸಬಹುದು. ತುರ್ತು ಸಂದರ್ಭದಲ್ಲಿ ಗಾಬರಿಯಾಗದೆ ಭಯಪಡದೆ ಹೃದಯ ಬಡಿತ ಹೆಚ್ಚಾಗಿ ಮಿಷನ್ ವೇಗವಾಗಿ ಹರಡುತ್ತದೆ ಆದ್ದರಿಂದ ರೋಗಿಯನ್ನು ಶಾಂತವಾಗಿಡಬೇಕು ಕಚ್ಚಿದ ಕೈ ಅಥವಾ ಕಾಲನ್ನು ಆದಷ್ಟು ಚಲಿಸಿದಂತೆ ಸ್ಥಿರವಾಗಿ ಇಡಿ ಯಾವುದೇ ನಾಟಿ ಔಷಧಿಗೆ ಕಾಯದೆ ತಕ್ಷಣ ಹತ್ತಿರದ ಆಂಟಿ ಸ್ನೇಕ್ ವೇನಂ ( ಂಟಿಣು ಖಿಟಿಚಿಞಜ ಗಿಜಟಿಠಟ– ಂಖಗಿ ) ಲಭ್ಯವಿರುವ ಆಸ್ಪತ್ರೆಗೆ ಕರೆದೋಯ್ದು ಚಿಕಿತ್ಸೆ ಕೊಡಿಸಬೇಕು ಗಾಯದ ಜಾಗವನ್ನು ಬ್ಲೇಡಿನಿಂದ ಕತ್ತರಿಸುವುದು ಅಥ–'ವಾ ವಿಷಯವನ್ನು ಬಾಯಿಂದ ಇರಲು ಪ್ರಯತ್ನಿಸಬಾರದು ತಕ್ಷಣ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಚಿಕಿತ್ಸೆಯನ್ನು ಕೊಡಿಸಬಹುದು. ಈ ಸಂದರ್ಭದಲ್ಲಿ ಉಪನ್ಯಾಸಕರುಗಳಾದ ಮೇಘಾ, ಮಂಜುಳಾ, ಕವಿತಾ, ಶಂಷಾದ ಬೇಗಂ ಹಾಗೂ ವಿದ್ಯಾರ್ಥಿ /ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಮಾನಸ ಗಂಗೋತ್ರಿ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಮೆಣಸಗೇರಿ ಗ್ರಾಮದ ಮಹರ್ಷಿ ವಾಲ್ಮೀಕಿ ಗ್ರಾಮೀಣ ವಿದ್ಯಾವರ್ಧಕ ಸಂಸ್ಥೆಯ ಮಾನಸ ಗಂಗೋತ್ರಿ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.**

ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾಮಕೃಷ್ಣ ಮಲ್ಲಪ್ಪ ಕಾಲವಾಡ ಅವರು ಕೇಕ್ ಕಟ್ಟು ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮೆಣಸಗೇರಿ, ಕಡೆಕೊಪ್ಪ,




ಕ್ಯಾದಿಗುಪ್ಪ ಹಾಗೂ ಮೆಣಸಗೇರಿ ತಾಂಡಾ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು.

ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಪಾಲಕರಿಗಾಗಿ ಬಿಸ್ಕೆಟ್ ತಿನ್ನುವ ಸ್ಪರ್ಧೆ ಆಯೋಜಿಸಲಾಗಿತ್ತು. ಪಾಲಕರು ಅತ್ಯಂತ ಉತ್ಸಾಹದಿಂದ ಸ್ಪರ್ಧೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಸವಿತಾ ತಳವಾರ, ಬಸವರಾಜ ಬೂದಿಹಾಳ, ಅನಸೂಯ ಕರಡಿ ಹಾಗೂ ಮಾರ್ಕಂಡೇಶ್ವರ ಶಾಲೆಯ ಶಿಕ್ಷಕಿ ಶ್ರೀಮತಿ ರೇಣುಕಾ ಮಾರುತೆಪ್ಪ ಕಾಚಾಪೂರ ಸೇ–ರಿದಂತೆ ಶಿಕ್ಷಕರು, ಪಾಲಕರು ಉಪಸ್ಥಿತರಿದ್ದರು.

### ಹಿಂದೂ ಮಹಾ ಮಂಡಳಿ ಗಣೇಶೋತ್ಸದಲ್ಲಿ ಮೊಳಗಿದ ದೇಶಭಕ್ತಿ, ಭಾರತೀಯ ಸಂಸ್ಕೃತಿಯ ಅದ್ದೂರಿ ಕವಿಗೋಷ್ಠಿ: ಕವಿಗಳಿಂದ ಭಾರತೀಯ ಪರಂಪರೆಯ ಅನಾವರಣ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದಲ್ಲಿ ಹಿಂದೂ ಮಹಾ ಮಂಡಳಿಯಿಔದ ಆಯೋಜಿಸಿದ್ದ ಗಣೇಶೋತ್ಸವದಲ್ಲಿ ಮೊದಲ ಬಾರಿಗೆ ಶನಿವಾರ ಕವಿಗೋಷ್ಠಿ ನಡೆಯಿತು.**

ಎಂಟು ಜನ ಕವಿಗಳು ವಿಶೇಷವಾದ ಕವಿತೆಗಳನ್ನು ವಾಚಿಸಿದರು. ವಿದ್ಯಾರ್ಥಿನಿ ಸಾಹಿತ್ಯ ಬಿಲಂಕರ್ ನನ್ನ ಭಾರತ ಕವಿತೆ ಮೂಲಕ ಜಗತ್ತಿಗೆ ಜ್ಞಾನ ನೀಡಿದ ಭಾರತ, ಶಿಕ್ಷಕಿ ವೀರಮ್ಮ ನಾಗರಾಜ ಸಂಸ್ಕೃತಿ ಎಲ್ಲಿದೆ? ಕವಿತೆ ಮೂಲಕ ಭಾರತೀಯ ನಾರಿ ಸೀರೆ ಉಟ್ಟರೆ ಜಗದ ಸುಂದ–ರಿಯಾಗುತ್ತಾಳೆ. ಮೊಬೈಲ್ ಬೇತಾಳದಂತಾಗಿದ್ದು ಗೂಗಲ್ ಡ್ಯಾಡಿ ಯೂಟ್ಯೂಬ್ ಮಮ್ಮಿ ಆಗಿದೆ. ಶಿಕ್ಷಕ ಬಡಿಗೇರ ಜಿಲಾನ್‌ಸಾಬ್ ಸನಾತನ



ಸಂಸ್ಕೃತಿ ಗಂಗೋತ್ರಿ ಕವಿತೆ ಮೂಲಕ ವಿಘ್ನಗಳ ವಿನಾಶಕ ಗಣೇಶನಾಗಿದ್ದು, ಋಷಿಮುನಿಗಳ ಸಂಸ್ಕೃತಿಯಿಔದ ಭಾರತ ವಿಶ್ವಗುರು ಎಂದೂ, ಮುಖ್ಯಶಿಕ್ಷಕ ರಾಜು ಬಿಲಂಕರ್ ಭಾರತೀಯರು ಸ್ತ್ರಿಯರನ್ನು ದೇವರೆಂದು ಪೂಜಿಸುವ ಸಂಸ್ಕೃತಿ ಭಾರತೀಯರದು, ಶಿಕ್ಷಕ ಎಸ್. ಶಾಮಸುಂದರರಾವ್ ಬೆನಕನ ಪೂಜೆ ಕವಿತೆ ಮೂಲಕ ದೇಶದ ಸ್ವಾತಂತ್ರ ಯಕ್ಕಾಗಿ ಗಣೇಶ ಹಬ್ಬ ಆರಂಭವಾಯಿತು.

ಆದರೆ, ಇಂದು ಆರಕ್ಷಕರ ರಕ್ಷಣೆಯಿಂದ, ಕೊಳ್ಳು ದಳ್ಳುರಿ ಮಧ್ಯೆ ಗಣೇಶ ಆಚರಣೆ ವಿಷಾಧನೀಯ, ಎಸ್.ರಾಮಪ್ಪ ನಮ್ಮ ಭಾರತ ನಮ್ಮ ಹೆಮ್ಮೆ ಕವಿತೆಯಲ್ಲಿ ಭಾರತ ಪವಿತ್ರವಾದ ಸಾಹಿತ್ಯಮಯ ದೇಶ ಎಂದೂ, ಪೀರಾವಲಿ ಹಂಚಿನಾಳ ನಮ್ಮ ಭಾರತೀಯ ಪರಂಪರೆ ದೇವಸ್ಥಾನ ಮಸೀದಿ ಚರ್ಚ್ ಒಂದೇ ರಾಮ ರಹಿಮಾ ಒಂದೇ ಎಂದೂ, ಶಿಕ್ಷಕ ಮುದಕಪ್ಪ ನೆಲಜೇರಿಯವರು ಬಹುತ್ವ ಸಂಸ್ಕೃತಿ ಭಾರತ ಕವಿತೆ ಮೂಲಕ ಭಾರತವು ಬಹುತ್ವದಲ್ಲಿ ಸಮಷ್ಟಿ ಸಾಧಿಸುವಂತೆ, ರಾಜೇಶ್ ಕನ್ನಡ ಸಂಸ್ಕೃತಿ ಕವಿತೆ ಮೂಲಕ ಕನ್ನಡವೇ ನನ್ನ ಜೀವನಕ್ಕೆ ಮುನ್ನುಡಿ, ಇಂದ್ರಜಿತ್‌ಸಿಂಗ್ ವೇದಪುರಾಣಗಳ ಭಾರತ ಭೂಮಿ ಕವಿತೆ ಮೂಲಕ ಭಾರತವು ವೇದಗಳ ತವರೂರು, ಜಗತ್ತಿಗೆ ಮೌಲ್ಯಗಳನ್ನು ನೀಡಿದ ದೇಶವಾಗಿದೆ ಎಂದು ಪ್ರತಿಧ್ವನಿಸಿದರು. ಶಿಕ್ಷಕಿ ಜ್ಯೋತಿ ಇಟಗಿ ಗಣೇಶ ಹಬ್ಬದ ಇತಿಹಾಸ ಕುರಿತು ಮಾತನಾಡಿದರು.

ಬಾಲಕಿ ಲಹರಿಯು ವಚನ, ವಿಘ್ನೇಶನ ಶ್ಲೋಕ ವಾಚಿಸಿದಳು. ಷಾ.ಮಿಯಚಂದ್ ಸರ್ಕಾರಿ ಹೈಸ್ಕೂಲ್ 10ನೇ ತರಗತಿ ವಿದ್ಯಾರ್ಥಿ ರಾಜೇಶ್ ಟಿ ಅವರು ದಾಸರ ಹಾಡು ಹಾಡಿದರು. ಹಿಂದೂ ಮಹಾ ಮಂಡಳಿ ಗಣೇಶೋತ್ಸವ ಅಧ್ಯಕ್ಷ ಪುಟ್ಟಿ ಸಚಿನ್, ಕಾರ್ಯಾಧ್ಯಕ್ಷ ದೇವರಮನೆ ಮಂಜುನಾಥ, ಖಜಾಂಚಿ ಎಸ್. ಎಂ.ಗುರುಪ್ರಸನ್ನ, ಕಾರ್ಯದರ್ಶಿ ಪುನೀತ್, ಸೇರಿದಂತೆ ಮಂಡಳಿಯ ಸರ್ವ ಸದಸ್ಯರು ಇದ್ದರು. ಇಂದ್ರಜಿತ್‌ಸಿಔಗ್ ನಿರೂಪಿಸಿದರು.

## ಅನಾಥರ ಬದುಕಿಗೆ ಬೆಳಕು ನೀಡಿದ ಪುಟ್ಟರಾಜರು: ಸೋಮನಾಥ ಶ್ವಾಚಾರ್ಯ ಸ್ವಾಮೀಜಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು:ಅರಮನೆಯಲ್ಲಿನಡೆಯುತ್ತಿರುವ ಸಂಗೀಕಾರ್ಯಕ್ರಮಗಳು ಗುರುಮನೆಯಲ್ಲಿ ಹಾಗೂ ಎಲ್ಲೆಡೆ ಸಂಗೀತ ಸಭೆಗಳನ್ನು ನಡೆಸುವಂತೆ ಮಾಡಿ ಜನಸಾಮಾನ್ಯರು ಸಂಗೀತ ಸುಧೆಯನ್ನು ಅನುಭವಿಸುವಂತಾಗಿದೆ ಎಂದು ಹೇಳಿ ಪುಟ್ಟರಾಜ ಗವಾಯಿಗಳು ಸಂಗೀತ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ ಅಂಧ, ಅನಾಥರ ಬದುಕಿಗೆ ಸಂಗೀತ ವಿದ್ಯೆಯನ್ನು ನೀಡಿ ಅವರ ಬಾಳಿಗೆ ಬೆಳಕಾಗಿದ್ದಾರೆಂದು ಸಿಂಧನೂರಿನ ಕರಿಬಸವ ನಗರದ ಬಾಳೆಹೊನ್ನೂರು ರಂಭಾಪುರಿ ಶಾಖಾ ಮಟದ ಶ್ರೀ ಷಟಸ್ಥಲ ಬ್ರಹ್ಮ ಸೋಮನಾಥ ಶಿವಾಚಾರ್ಯ ಹೇಳಿದರು.**

ಅವರು ನಗರದ ಸುಕಾಲಪೇಟೆ ರಸ್ತೆಯಲ್ಲಿರುವ ಶ್ರೀ ಗುರು ಪಂಚಾಕ್ಷರಿ ಪುಟ್ಟರಾಜ ಗವಾಯಿಗಳ ಸಂಗೀತ ಸೇವಾ ಸಮಿತಿ ಯಿಂದ ಪಂಚಾಕ್ಷರಿ ಸಂಗೀತ ಸಲಕರಣೆ ಕೇಂದ್ರ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಲಿಂಗೈಕ್ಯ ಡಾಕ್ಟರ್ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 16ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ವೀರಭದ್ರಯ್ಯ ಎಸ್ ಮಾಜಿ ಯೋಧರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ಬೀರಪ್ಪ




ಶಂಭೋಜಿ ಮಾತನಾಡಿ ಜಾನಪದ ಕಲಾವಿದ ತಬಲಾವಾದಕ ಬಸವಾರಾಜ ಮೋತಿ ಅವರು ನಿರಂತರವಾಗಿ ಪುಟ್ಟರಾಜ ಗವಾಯಿಗಳ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡುತ್ತ ಬಂದಿದ್ದಾರೆ. ಅವರ ಮಗ ಪುಟ್ಟರಾಜ ಶಾಸ್ತ್ರೀಯ ಸಂಗೀತಗಾರನಾಗಿ ಬೆಳತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಪಂಪಯ್ಯ ಸ್ವಾಮಿ ಸಾಲಿಮಠ ಮಾತನಾಡಿ ಸಂಗೀತಕ್ಕೆ ಅಪಾರವಾದ ಶಕ್ತಿಯಿದೆ, ಬಸವರಾಜ ಮೋತಿ ಕುಟುಂಬದವರು ಪುಟ್ಟರಾಜ ಗವಾಯಿಗ್ ಕಾರ್ಯಕ್ರಮಗಳನ್ನು ಭಕ್ತಿ ಶ್ರದ್ದೇಯಿಂದ ಮಾಡುತ್ತ ಬಂದಿದ್ದಾರೆ. ನಿಜವಾದ ಸಹೃದಯಿಗಳೆಂದು ಮೆಚ್ಚುಗೆ ವ್ಯಕ್ತಪಡಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಿತಿಯ ಅಧ್ಯಕ್ಷರಾದ ಬಸವರಾಜ್ ಮೋತಿ ಅವರು ವಹಿಸಿಕೊಂಡಿದ್ದರು ಜಾನಪದ ಕಲಾವಿದ ಅಮರೇಶ್ ಹಸಮಕಲ್, ಅಕ್ಕನ ಬಳಗದ ಪಾರ್ವತಮ್ಮ ಬಿ ಸಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕುಮಾರ್ ಪುಟ್ಟರಾಜ ಸಂಗೀತ ಶಿಕ್ಷಕರು ಮತ್ತು ತಂಡದವರಿಂದ. ತತ್ವಪದ ನಾರಾಯಣಪ್ಪ ಮಾಡಿಸಿರುವಾರ ಹಾಗೂ ತಂಡದವರಿಂದ. ಜನಪದ ಸಂಗೀತ ಭೋಜರಾಜ ಸಂಗೀತ ಶಿಕ್ಷಕರು ಹಾಗೂ ತಂಡದವರು ಕಾರಟಗಿ , ಮಲ್ಲಮ್ಮ ಬಸವರಾಜ್ ಮೋತಿ,ಮತ್ತು ಶರಣು ಕುಮಾರ್ ಮೋತಿ, ದಿಲ್‌ರುಬಾ ವಾದನ ಶಾಂತವೀರಯ್ಯ ಸ್ವಾಮಿ ಮದಿರೆ,. ಕ್ಲಾ–ರಿನೆಟ್ ವಾದನ ರಾಮಾಂಜನೇಯಲು, ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು ಆಂಜನೇಯ ಸ್ವಾಗತಿಸಿದರು, ಚನ್ನಯ್ಯ ಸ್ವಾಮಿ ಕಲ್ಮಠ ಕಾರ್ಯಕ್ರಮದ ನಿರೂಪಿಸಿದರು.

## ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಉದ್ಘಾಟನ ಭಾಗ್ಯ ಭರದ ಸಿದ್ಧತೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನ ಕರಡಕಲ್ ಗ್ರಾಮದ ವರವಲಯದ ನಾರಾಯಣಪುರ ಮುಖ್ಯ ರಸ್ತೆಯಲ್ಲಿ ನೂತನವಾಗಿ ನಿರ್ಮಾಣ ಗೊಂಡಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಉದ್ಘಾಟನ ಭಾಗ್ಯ ಬಂದಿದ್ದು ಭರದ ಸಿದ್ಧತೆಗಳು ನಡೆಯುತ್ತಿವೆ.**

ಇದೆ ತಿಂಗಳ ಒಳಗೆ ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಉದ್ಘಾಟನೆಗೊಳ್ಳಲಿದೆ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಇಂದು ಆಸ್ಪತ್ರೆ ಆವರಣದಲ್ಲಿ ಬೃಹತ್ ಸ್ವಚ್ಛತಾ ಕಾರ್ಯ ಬರದಿಂದ ಸಾಗಿದೆ . ಆಸ್ಪತ್ರೆಯ ವಾರ್ಡ್‌ಗಳು, ಆವರಣ , ವೈದ್ಯಕೀಯ ಉಪಕರಣಗಳು, ಹಾಸಿಗೆ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಸಂಪೂರ್ಣ ಪ್ರದೇಶವನ್ನು ಸ್ವಚ್ಛಗೊಳಿಸಲಾಯಿತು. ಜೊತೆಗೆ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿ ಬೇಕಿರುವ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆರಂಭದಿಂದ ತಾಲೂಕಿನ ಬಾಣಂತಿಯರು ಮತ್ತು ಮಕ್ಕಳಿಗೆ ಉತ್ತಮ ಗುಣಮಟ್ಟದ ಆರೋಗ್ಯ




ಸೇವೆ ದೊರೆಯಲಿದ್ದು, ಸಾರ್ವಜನಿಕ ವಲಯದಲ್ಲಿ ಸಂತಸ ವ್ಯಕ್ತವಾಗಿದೆ. ಕಟ್ಟಡ ನಿರ್ಮಾಣವಾಗಿ ಬಹುದಿನಗಳಾದರೂ ಉದ್ಘಾಟನೆ ವಿಳಂಬವಾಗುತ್ತಿದ್ದ ರಿಂದ ವಿವಿಧ ಸಂಘ–ಸಂಸ್ಥೆಗಳು ಆಸ್ಪತ್ರೆಯನ್ನು ಶೀಘ್ರ ಆರಂಭಿಸಬೇಕೆಂದು ಒತ್ತಾಯಿಸುತ್ತಿದ್ದರು. ಈ ಉದ್ಘಾಟನಾ ಸಮಾರಂಭಕ್ಕೆ ಆರೋಗ್ಯ ಸಚಿವರು , ಉಸ್ತುವಾರಿ ಸಚಿವರು , ಹಿರಿಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಆಗಮಿಸುವ ನಿರೀಕ್ಷೆ ಇದ್ದು, ಶೀಘ್ರದಲ್ಲೇ ಅಧಿಕೃತ ಕಾರ್ಯಕ್ರಮದ ನಿಖರ ದಿನಾಂಕ ಪ್ರಕಟವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ. ಈ ಸಂದರ್ಭದಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ. ರುದ್ರಗೌಡ ಪಾಟೀಲ್ ಮತ್ತು ಮಕ್ಕಳ ತಜ್ಞ ಡಾ. ಸಂಜೀವ್ ರೆಡ್ಡಿ ಹಾಗೂ ಸಿಬ್ಬಂದಿ ವರ್ಗದವರು ಇದ್ದರು .

## ವಚನ ದರ್ಶನ

ನುಡಿದರೆ ಮುತ್ತಿನ ಹಾರದಂತಿರಬೇಕು,ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,ನುಡಿದರೆ ಸ್ಫಟಿಕದ ಶಲಾಕೆಯಂತಿ–ರಬೇಕು,ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು.ನುಡಿಯೊಳಗಾಗಿ ನಡೆಯದಿದ್ದರೆ,ಕೂಡಲಸಂಗಮದೇವನೆಂತೊಲಿವನಯ್ಯ?

12ನೆಯ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ವಿಶ್ವಗುರು ಬಸವಣ್ಣನವರು ಬರೆದ ಅತ್ಯಂತ ಜನಪ್ರಿಯ ಹಾಗೂ ಮಾರ್ಗದರ್ಶಕವಾದ ವಚನ ಸಾಹಿತ್ಯದ ಒಂದು ಭಾಗವಾಗಿದೆ. ಮನುಷ್ಯನ ಮಾತು ಮತ್ತು ನಡತೆ ಹೇಗಿರಬೇಕು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಅತ್ಯಂತ ಮಾರ್ಮಿಕವಾಗಿ ವಿವ–ರಿಸಿದ್ದಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು.ನಮ್ಮ ಮಾತುಗಳು ಮುತ್ತಿನ ಹಾರದಂತೆ ಸುಂದರ, ಆಕರ್ಷಕ ಮತ್ತು ಮೌಲ್ಯಯುತವಾಗಿರಬೇಕು. ಮಾತಿನಲ್ಲಿ ಕೋಮಲತೆ ಮತ್ತು ಸೌಜನ್ಯವಿರಬೇಕು.

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನಾವು ಆಡುವ ಮಾತುಗಳು ಕತ್ತಲೆಯನ್ನು ದೂರಾಗಿಸುವ ಮಾಣಿಕ್ಯದ ಬೆಳಕಿನಂತೆ ಇತರರ ಜೀವನಕ್ಕೆ ದಾರಿದೀಪವಾಗಬೇಕು ಮತ್ತು ಜ್ಞಾನವನ್ನು ಹರಡಬೇಕು.

ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ಮಾತುಗಳು ಸ್ಫಟಿಕದ ಕಡ್ಡಿಯಂತೆ ಅತ್ಯಂತ ಸ್ಪಷ್ಟ, ನೇರ ಹಾಗೂ ಪಾರದರ್ಶಕವಾಗಿರಬೇಕು. ಅದರಲ್ಲಿ ಯಾವುದೇ ಕಪಟತನ ಅಥವಾ ಅಸ್ಪಷ್ಟತೆ ಇರಬಾರದು.

ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು. ನಮ್ಮ ಸತ್ಯವಾದ ನುಡಿಗಳನ್ನು ಕೇಳಿ ಸ್ವತಃ ಭಗವಂತನೇ ಲಿಂಗ ಮೆಚ್ಚುಗೆ ವ್ಯಕ್ತಪಡಿಸುವಂತಿರಬೇಕು.

ನುಡಿಯೊಳಗಾಗಿ ನಡೆಯದಿದ್ದರೆ. ನಾವು ಆಡುವ ಮಾತಿನಂತೆ ನಮ್ಮ ಜೀವನದ ನಡತೆ ಇಲ್ಲದಿದ್ದರೆ, ಆ ದೇವ ಕೃತಜ್ಞನಾಗುವುದಿಲ್ಲ. ಅಂದರೆ, ನುಡಿ ಮತ್ತು ನಡೆ ಒಂದೇ ಆಗಿರಬೇಕು ಕಥನಿ ಮತ್ತು ಕರನಿ ಒಂದಾಗಿರಬೇಕು ಇಲ್ಲದಿದ್ದರೆ ದೇವ ಒಲಿಯಲಾರ. ಇಂಥಹ ವಚನಗಳು ನಮಗೆ ದಾರಿದೀಪವಾಗಲಿ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

## ಕ್ರೀಡೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಬೆಳೆಸುತ್ತದೆ: ಪ್ರತಾಪಗೌಡ ಪಾಟೀಲ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಶಿಕ್ಷಣದ ಜತೆಗೆ ಕ್ರೀಡೆಗೂ ಆದ್ಯತೆ ನೀಡಿದಾಗ ವಿದ್ಯಾರ್ಥಿಗಳಲ್ಲಿ ಶಿಸ್ತು, ಆತ್ಮವಿಶ್ವಾಸ ಹಾಗೂ ನಾಯಕತ್ವ ಗುಣಗಳು ಬೆಳೆಯುತ್ತವೆ. ಗೆಲುವು?ಸೋಲನ್ನು ಸಮಾನವಾಗಿ ಸ್ವೀಕರಿಸಿ ಕ್ರೀಡಾಸ್ಫೂರ್ತಿಯಿಂದ ಮುನ್ನಡೆಯಬೇಕು ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ ಹೇಳಿದರು.**



ಮಸ್ಕಿ ತಾಲೂಕು ಖಾಸಗಿ ಕಾಲೇಜುಗಳ ಪ್ರಾಚಾರ್ಯರ ಸಂಘದ ವತಿಯಿಂದ ಆಯೋಜಿಸಿದ್ದ 2026–27ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು. ಕ್ರೀಡಾಕೂಟಗಳು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣಗೊಳಿಸಲು ಉತ್ತಮ ವೇದಿಕೆಯಾಗಿವೆ. ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಸ್ಥೈರ್ಯವೂ ವೃದ್ಧಿಯಾಗುತ್ತದೆ. ವಿದ್ಯಾರ್ಥಿಗಳು ಕ್ರೀಡಾಸ್ಫೂರ್ತಿಯಿಂದ ಸ್ಪರ್ಧಿಸಿ ಉತ್ತಮ ಸಾಧನೆ ಮಾಡಬೇಕು ಎಂದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಸ್ಕಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರ, ಬಾಲಕಿಂ–ಯರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ರಂಗಪ್ಪ, ಪುರಸಭೆ ಸದಸ್ಯರಾದ ಶರಣಬಸವ ಸೊಪ್ಪಿಮಠ, ದೊಡ್ಡ ಕ–ರಿಯಪ್ಪ, ಬಸವರಾಜ ಬುಕ್ಕಣ್ಣ, ಖಾಸಗಿ ಪದವಿ ಪೂರ್ವ ಕಾಲೇಜುಗಳ ಅಧ್ಯಕ್ಷ ನಾಗೇಶ, ಬಾಲಕಿಯರ ಪ್ರೌಢಶಾಲೆಯ ಮುಖ್ಯಶಿಕ್ಷಕ ಬಸಪ್ಪ ತನಿಕೆದಾರ ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಚಾರ್ಯರು, ಉಪನ್ಯಾಸಕರು ಉಪಸ್ಥಿತ–ರಿದ್ದರು. ತಾಲೂಕಿನ ವಿವಿಧ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

# ರಾಯಚೂರು ಜಿಲ್ಲಾ ವಕ್ಫ್ ಸಮಿತಿಗೆ ಕೂಡಲೇ ಅಧ್ಯಕ್ಷರ ನೇಮಕಕ್ಕೆ AIMIM ಮನವಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾ ವಕ್ಫ್ ಸಮಿತಿಗೆ ಹಲವು ತಿಂಗಳುಗಳಿಂದ ಅಧ್ಯಕ್ಷರ ನೇಮಕವಾಗದೆ ಕಾರ್ಯಚಟುವಟಿಕೆಗಳು ಕುಂಠಿತಗೊಂಡಿರುವ ಹಿನ್ನೆಲೆಯಲ್ಲಿ, ಕೂಡಲೇ ಅರ್ಹ ಹಾಗೂ ಸಮರ್ಥ ಅಧ್ಯಕ್ಷರನ್ನು ನೇಮಕ ಮಾಡಬೇಕೆಂದು ಆಲ್ ಇಂಡಿಯಾ ಮಜ್ಲಿಸ್–ಎ–ಇತ್ತೇಹಾದುಲ್ ಮುಸ್ಲಿಮೀನ್ (AIMIM) ರಾಯಚೂರು ನಗರ ಘಟಕದ ವತಿಯಿಂದ ಸಚಿವ ಯು.ಟಿ. ಖಾದರ್ ಹಾಗೂ ಜಿಲ್ಲಾ ವಕ್ಫ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.**

AIMIM ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದಡಿ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ರಾಯಚೂರು ಜಿಲ್ಲೆಯಲ್ಲಿ ಹಲವಾರು ಮಸೀದಿಗಳು, ದರ್ಗಾಗಳು, ಈದ್ಗಾ ಮೈದಾನಗಳು ಸೇರಿದಂತೆ ವಿವಿಧ ವಕ್ಫ್



ಸಂಸ್ಥೆಗಳು ಹಾಗೂ ಆಸ್ತಿಗಳಿವೆ. ಅವುಗಳ ಸಮರ್ಪಕ ನಿರ್ವಹಣೆ, ಸಂರಕ್ಷಣೆ, ಅಭಿವೃದ್ಧಿ ಹಾಗೂ ಸಾರ್ವಜನಿಕರ ಅಹವಾಲುಗಳಿಗೆ ಸ್ಪಂದಿಸಲು ಜಿಲ್ಲಾ ಮಟ್ಟದಲ್ಲಿ ಸಕ್ರಿಯ ವಕ್ಫ್ ಸಮಿತಿ ಹಾಗೂ ಅಧ್ಯಕ್ಷರ ಅಗತ್ಯವಿದೆ ಎಂದು ೦ಖಒಖಒ ಮುಖಂಡರು ತಿಳಿಸಿದ್ದಾರೆ.

ಅಧ್ಯಕ್ಷರ ಹುದ್ದೆ ಖಾಲಿ ಇರುವುದ–ರಿಂದ ಸಾರ್ವಜನಿಕರ ಸಮಸ್ಯೆಗಳ ಪರಿಹಾರ ಹಾಗೂ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ವಿಳಂಬವಾಗುತ್ತಿದೆ. ಇದರಿಂದ ಸಾರ್ವಜನಿಕರಲ್ಲಿ ಅಸಮಾಧಾನ ಉಂಟಾಗುತ್ತಿದೆ ಎಂದು ಅವರು ಗಮನ ಸೆಳೆದಿದ್ದಾರೆ. ಆದ್ದರಿಂದ ವಕ್ಫ್ ಸಂಸ್ಥೆಗಳು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಅರ್ಹ ವ್ಯಕ್ತಿಯನ್ನು ಜಿಲ್ಲಾ ವಕ್ಫ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿ, ಸಮಿತಿಯ ಕಾರ್ಯಚಟುವಟಿಕೆಗಳು ಸುಗಮವಾಗಿ ನಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ೦ಖಒಖಒ ವತಿಯಿಂದ ಆಗ್ರಹಿಸಲಾಯಿತು.

ಈ ಸಂದರ್ಭದಲ್ಲಿ ಶೈಬಾಜ್ ಖಾನ್, ನಗರ ಪ್ರಧಾನ ಕಾರ್ಯದರ್ಶಿ; ತನ್ವೀರ್ ಅಹ್ಮದ್ ಖಾನ್, ನಗರ ಜಂಟಿ ಕಾರ್ಯದರ್ಶಿ; ಮೊಹಮ್ಮದ್ ಅಲಿಂ, ವಾರ್ಡ್ ನಂ.29ರ ಅಧ್ಯಕ್ಷರು; ರಹಮಾನ್ ಸಬ್, ವಾರ್ಡ್ ನಂ.28 ಮತ್ತು 29ರ ಪ್ರಧಾನ ಕಾರ್ಯದರ್ಶಿ ಹಾಗೂ ಮೊಹಮ್ಮದ್ ಅವೈಜ್ ಉಪಸ್ಥಿತರಿದ್ದರು.

# ತಾಂಡವಪುರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕೊನೆಯ ಹಂತದ ಪರಿಶೀಲನೆ ಕಾರ್ಯಕ್ರಮ ಆರಂಭ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ ಸೆಪ್ಟೆಂಬರ್ 21 ರಾಜ್ಯದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ರಮ ಎಸ್ಐಆರ ಕಾರ್ಯಕ್ರಮ ಬಹಳ ಪ್ರಗತಿಯಲ್ಲಿ ಸಾಗಿದ್ದು ಇಂದು ನಂಜನಗೂಡು ತಾಲೂಕು ಚಿಕ್ಕಯ್ಯ ಛತ್ರ ಹೋಬಳಿ ತಾಂಡವಪುರ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಗ್ರಾಮಗಳ ಮತದಾರ ಪಟ್ಟಿ ಪರಿಷ್ಕರಣೆಯ ಕೊನೆ ಹಂತದ ಪರಿಶೀಲನೆ ಕಾರ್ಯಕ್ರಮ ಆರಂಭವಾಗಿದೆ ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ಚಿಕ್ಕಯ್ಯನ ಛತ್ರ ಹೋಬಳಿ ವರುಣ ವಿಧಾನಸಭಾ ಕ್ಷೇತ್ರಕ್ಕೆ ಶಿರುವ ತಾಂಡವಪುರ ಗ್ರಾಮ ಪಂಚಾಯತಿ ಕಚೇರಿಯಲ್ಲಿ ಚುನಾವಣಾ ಅಧಿಕಾರಿ ಮಹೇಶ್ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ಹಾಗೂ ಕಂದಾಯ ಇಲಾಖೆಯ ವೀರೇಶ್ ಸಮ್ಮುಖದಲ್ಲಿ ಮತದಾರ ಪಟ್ಟಿ, ಕೊನೆಯ ಹಂತದ ಪರಿಸರ ಕಾರ್ಯಕ್ರಮ ಆರಂಭವಾಗಿದೆ**

ಬಳಿಕ ಮಾತನಾಡಿದ ಮಹೇಶ್ ರವರು ಯಾರು ಚುನಾವಣಾ ಪಟ್ಟಿಯಲ್ಲಿ ದೋಷ ಕಂಡು ಬಂದಿದೆ ಅಂತವರಿಗೆ ನಮ್ಮ ಮತದಾರ ಪಟ್ಟಿಯ ಪರಿಷ್ಕರಣೆಯ ಬಿ ಎಲ್ ಓ ಗಳು ಅವರಿಗೆ ತಮ್ಮ ಮತದಾರ ಪಟ್ಟಿಯನ್ನು ಸರಿಪಡಿಸಿಕೊಳ್ಳಲು ನೋಟಿಸಿ ನೀಡಿದ್ದು ಈ ಹಿನ್ನಲೆಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಈ ಕಾರ್ಯಕ್ರಮ ನಡೆಯುತ್ತಿದ್ದು ಮತದಾರರ ತಮ್ಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ತಿದ್ದುಪಡಿ ಅಥವಾ ವರ್ಗಾವಣೆ ಅಥವಾ ಮತ್ತೊಂದು ಸಮಸ್ಯೆಗಳಿದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳಲು ತಿದ್ದುಪಡಿ ಮಾಡಿಕೊಳ್ಳಲು ಅವರಿಗೆ ಕೊನೆಯ ಅವಕಾಶ ನೀಡಲಾಗಿದ್ದು ಬಿ ಎಲ್ ಓ ಗಳು ಮತದಾರರಿಗೆ ನೀಡಿರುವ ನೋಟಿಸ್ ನಲ್ಲಿ ಆ ದಿನಾಂಕದೊಳಗೆ ಬಂದು ತಮ್ಮ ಮತದಾರರ ಪಟ್ಟಿಯ ಪಟ್ಟಿಯಲ್ಲಿ ತಮ್ಮ ಹೆಸರು ಸೇರಿಸಿಕೊಳ್ಳಲು ಅವಕಾಶವಿದ್ದು ಈ ಅವಕಾಶವನ್ನ ಮತದಾರರು ಪಡೆದುಕೊಂಡು ಪಟ್ಟಿಯಲ್ಲಿ ತಮ್ಮ



ಹೆಸರನ್ನು ಸೇರಿಸಿಕೊಳ್ಳುವ ಅವಕಾಶ ಇದ್ದು ತಪ್ಪದೇ ಬಂದು ಮತದಾರರು ಸರ್ಪಡಿಸಿಕೊಳ್ಳುವಂತೆ ತಿಳಿಸಿದರು ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಅಧಿಕಾರಿ ಹಾಗೂ ಚುನಾವಣಾ ಅಧಿಕಾರಿಯಾದ ಮಹೇಶ್ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ಕಂದಾಯ ಇಲಾಖೆಯ ಚುನಾವಣಾಧಿಕಾರಿ ವೀರೇಶ್ ಕಾರ್ಯದರ್ಶಿ ಕೆಕೆ ಮರಯ್ಯ ಪಂಚಾಯಿತಿ ಲೆಕ್ಕ ಸಹಾಯಕ ಎಸ್ ಪುಟ್ಟರಾಜು ಹಾಗೂ ಬಿ ಎಲ್ ಓ ಗಳು ಪಂಚಾಯಿತಿ ಸಿಬ್ಬಂದಿ ವರ್ಗದವರು ಹಾಜರಿದ್ದರು

# ಭಾರತೀಯ ಕಿಸಾನ್ ಸಂಘ ಮೈಸೂರಿನ ಲಕ್ಷ್ಮಿಪುರಂ ಪೋಸ್ಟ್ ಆಫೀಸ್ ನಲ್ಲಿ ಅಂಚೆ ಚಳುವಲ್ಲಿ

❑ ನೈಜ್ಯ ದೆಸೆ ನ್ಯೂಸ್

**ತಾಂಡವಪುರ ಸೆಪ್ಟೆಂಬರ್ 21ಭಾರತೀಯ ಕಿಸಾನ್ ಸಂಘ ಮೈಸೂರಿನ ಲಕ್ಷ್ಮಿಪುರಂ ಪೋಸ್ಟ್ ಆಫೀಸ್ ನಲ್ಲಿ ಅಂಚೆ ಚಳುವಲ್ಲಿ ನಡೆಸಿದರು**

ಸಂಘ ಪ್ರಧಾನ ಕಾರ್ಯದರ್ಶಿ ರವಿ ಗಂಡತೋರು ಮಾತನಾಡಿ ರೈತರಿಗೆ ಉತ್ತಮ ಮಳೆ ಇಲದೇ ಬೆಳೆ ಇಲ್ಲದೆ ಸಾಕಷ್ಟದಲ್ಲಿದು ಮಾನ್ಯ ಮುಖ್ಯಮಂತ್ರಿಗಳು ತುರ್ತು ಮಳೆಯಶ್ರೀತ ಮತ್ತು ನೀರಾವರಿ ಜಮೀನಿಗೆ ಪರಿಹಾರ ಘೋಷಣೆ ಪ್ರತಿ ರೈತರಿಗೆ ಎಕರೆಗೆ 50,000 ಸಾವಿರ ರೂಪಾಯಿ ನಿಗದಿ ಮಾಡಬೇಕು ರೈತರು ಜೀವನ ಉಪಯೋಗಕ್ಕಾಗಿ ಈಗಾಗಲೇ ಬಿತನ ಬೀಜ ಗೊಬ್ಬರ ಉಳುಮೆ ಗೊಬ್ಬರ ಸೇರಿದಂತೆ ರೈತರು ವಿವಿಧ ಬ್ಯಾಂಕ್ಗಳಲ್ಲಿ ಸಾಲ ಸೌಲಭ್ಯ ಮಾಡಿದ್ದು ಈ ಸಾಲ ರೈತರ ಕಟ್ಟಲು ಆಗದೆ ರಿನಿವಲ್ ಮಾಡಲು ಆಗದ ಪರಿಸ್ಥಿತಿಯಲ್ಲಿದ್ದು ರೈತರ ಜಮೀನಿಗೆ ಕೆರೆ. ಕಟ್ಟೆ.ಹಳ್ಳಕ್ಕೆ ನೀರು ತುಂಬಿಸಲು ನೀವು ಮೇಕೆದಾಟು ಪಾದಯಾತ್ರೆ ಮಾಡಿದ ತಾವು ಈ ಮೇಕೆದಾಟು ಅನೇಕಟ್ಟೆಗೆ ಹಣ ಬಿಡುಗಡೆ ಮಾಡಿ ಕೆಲಸ ಪ್ರಾರಂಭಿಸಿ ಈ ಭಾಗದ ರೈತರ ಹಿತ



ಕಾಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ರೈತರ ಪರವಾಗಿ ಆಗ್ರಹಿಸಲಾಯಿತು ತಾಲೋಕು ಅಧ್ಯಕ್ಷರಾದ ನಾಗಲಾಗೆರೆ ಶಿವಕುಮಾರ್ ಮಾತನಾಡಿ ರೈತರು ಆರ್ಥಿಕವಾಗಿ ತೊಂದರೆಯಲ್ಲಿದು ರೈತರು ಪ್ರತಿ ಹಳ್ಳಿಗಳಲ್ಲಿ ಹೈನುಗಾರಿಕೆಯಲ್ಲಿ ತೊಡಗಿದ್ದು ಪ್ರತಿ ಲೆಟರ್ ಗೆ 36+4=40 ರೂಪಾಯಿಯನ್ನು ನೀಡುತ್ತಿದ್ದು ಇದು ಹುಲ್ಲು ನೀರು ಮೇವು ತಿಂಡಿ ಸಿರಿದಂತೆ ಅಗತ್ಯ ವಸ್ತುಗಳ ಬೆಲೆ ಗಗನಕೇರಿದ್ದು ಹೈನೋದ್ಯಮ ರೈತರಿಗೆ ನೀಡುತ್ತಿರುವ ಹಣ ಸಾಕಾಗುವುದಿಲ್ಲ ಕೇರಳ ಆಂಧ್ರ ಪ್ರದೇಶ ತಮಿಳುನಾಡು ಮಹಾರಾಷ್ಟ್ರ ಸರ್ಕಾರ ಹಾಲ್ಲಿಗೆ ಪ್ರೋತ್ಸಾಹ ಧನ ಸೇರಿ 60 ನಿಗದಿ ಪಡಿಸಿವೆ ಕರ್ನಾಟಕ ಸರ್ಕಾರ ಮತ್ತು ಕೆ. ಎಂ.ಎಫ್. ಒಕ್ಕೂಟಗಳು ಸೇರಿದಂತೆ ರೈತರ ಪ್ರತಿ ಲೀಟರ್ ಹಾಲಿಗೆ 50 ರೂಪಾಯಿಗಳನ್ನು ತಕ್ಷಣ ಜಾರಿಗೊಳಿಸಬೇಕೆಂದು ಸರ್ಕಾರವನ್ನು ಮನವಿ ಮಾಡಿದರು ಪ್ರಾಂತ ಮಹಿಳಾ ಪ್ರಮುಕರಾದ ಪುಟ್ಟಮ್ಮ ಶ್ರೀಕಾಂಟೆಗೌಡ ಮಾತನಾಡಿ ರೈತರ ಆರಾಧ್ಯ ದೇವಾ ಬಲರಾಮ ಜಯಂತಿಯಾ ವಿಚಾರ ತಿಳಿಸಿ ಮನುಕುಲದ ಪ್ರಥಮ ನೀರಾವರಿದತಾ.

ಮಣ್ಣಿನ ಪ್ರಥಮ ಕೃಷಿಕ ಸಮೃದ್ಧಿ ಕೃಷಿ ಜೊತೆಗೆ ಜೀವನಪಾಯ ವಿಚಾರದಲ್ಲಿ ತಿಳಿಸಿ ಕಬ್ಬುಬೆಳೆಗರರಿಗೆ ದಕ್ಷಿಣದ ಕಾರ್ಖಾನೆಗಳು ರೈತರಿಗೆ ಅನ್ಯಾಯ ಮಾಡುತ್ತಿದ್ದು ಸರ್ಕಾರ ಮಧ್ಯ ಪ್ರವೇಶ ಮಾಡಿ ಈ ಭಾಗದ ರೈತರಿಗೆ ನ್ಯಾಯ ಕೊಡಿಸಬೇಕು ಮನವಿ ಮಾಡಿದರು ಈ ಸಂದರ್ಭದಲ್ಲಿ ಪ್ರಾಂತ ಮಹಿಳಾ ಪ್ರಮುಖರು ಪುಟ್ಟಮ್ಮ ಶ್ರೀಕಾಂಟೆಗೌಡ ಪ್ರಧಾನ ಕಾರ್ಯದರ್ಶಿ ರವಿ ಗಂಡತೋರು ತಾಲೋಕು ಅಧ್ಯಕ್ಷರಾದ ನಾಗಲಾಗೆರೆ ಶಿವಕುಮಾರ್ ಮೈಸೂರು ಉಪಾಧ್ಯಕ್ಷರದ ಆನಂದ್ ಸಿಗ್ ಪುಷ್ಪವತಿ ಸಿದ್ದರಾಜು ಮುನೇಶ್ವರ ನಗರ ಮುಖಂಡರಾದ ಜಗದೀಶ್ ಸುಪ್ರೀತ್ ಮಂಜುನಾಥ್.ಸಿ. ಹಿರಿಯ ಕಾರ್ಯಕರ್ತ ಮಾ. ಸ. ಪ್ರವೀಣ್ ರವರು ಸೇರದಂತೆ ಮುಂತಾದವರು ಹಾಜರಿದ್ದರು

# ಸೌಜನ್ಯಾ ಅತ್ಯಾಚಾರ, ಕೊಲೆ ಪ್ರಕರಣ : ಸಿಬಿಐ ತನಿಖೆಗೆ ಅಸಮಾಧಾನ : ವರದಿ ಸಲ್ಲಿಕೆಗೆ 3 ತಿಂಗಳು ಗಡುವು

❑ ನೈಜ್ಯ ದೆಸೆ ನ್ಯೂಸ್

**ಧರ್ಮಸ್ಥಳದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಮತ್ತೆ ಸುದ್ದಿಯ ಮುನ್ನೆಲೆಗೆ ಬಂದಿದೆ. ಪ್ರಕರಣದ ತನಿಖೆಯನ್ನು ಹೊಸದಾಗಿ ನಡೆಸುವಂತೆ ಸುಪ್ರೀಂ ಕೋರ್ಟ್ ಮಹತ್ವದ ನಿರ್ದೇಶನ ನೀಡಿದ್ದು, ಹಿಂದಿನ ತನಿಖೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳನ್ನು ಹೊರಗಿಟ್ಟು ಹೊಸ ತನಿಖಾ ತಂಡ ರಚಿಸುವಂತೆ ಸೂಚಿಸಿದೆ.**

ಪ್ರಕರಣದ ಮರುತನಿಖೆ ಪೂರ್ಣಗೊಳಿಸಿ ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕು ಎಂದು ನ್ಯಾಯಪೀಠ ಗಡುವು ನಿಗದಿ ಪಡಿಸಿದೆ. ಈ ಆದೇಶದಿಂದ ಹಲವು



ವರ್ಷಗಳಿಂದ ಮುಂದುವರಿದಿದ್ದ ಪ್ರಕರಣಕ್ಕೆ ಮತ್ತೊಂದು ಮಹತ್ವದ ತಿರುವು ಸಿಕ್ಕಂತಾಗಿದೆ. ತಾಯಿಯ ಮೇಲ್ಮನವಿಗೆ ಸ್ಪಂದನೆ ಸೌಜನ್ಯಾ ಅವರ ತಾಯಿ ಕುಸುಮಾವತಿ ಗೌಡ ಅವರು ಪ್ರಕರಣದ ತನಿಖೆ ಮತ್ತು ವಿಚಾರಣೆಯ ಕುರಿತು ಅಸಮಾಧಾನ ವ್ಯಕ್ತಪಡಿಸಿ ನ್ಯಾಯಾಲಯದ ಮೊರೆ ಹೋಗಿದ್ದರು. ಸಿಬಿಐ ತನಿಖೆಯ ಆದ–ಾರದ ಮೇಲೆ ವಿಚಾರಣಾ ನ್ಯಾಯಾಲಯ ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ಇದನ್ನು ಪ್ರಶ್ನಿಸಿ ಅವರು ಕರ್ನಾಟಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಹೈಕೋರ್ಟ್‌ನಲ್ಲಿ ಪರಿಹಾರ ದೊರೆಯದ ಹಿನ್ನೆಲೆಯಲ್ಲಿ ಕುಸುಮಾವತಿ ಗೌಡ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ, ಪ್ರಕರಣವನ್ನು ಸ್ವತಂತ್ರವಾಗಿ ಮರುತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಸಂಜೀವ್ ಸಚ್‌ದೇವ್ ಅವರ ಪೀಠ ಇದೀಗ ಮರುತನಿಖೆಗೆ ಆದೇಶಿಸಿದೆ.

ಪ್ರಕರಣದ ಹಿಂದಿನ ತನಿಖಾ ಪ್ರಕ್ರಿಯೆ ಬಗ್ಗೆಯೂ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ತನಿಖಾಧಿಕಾರಿ ಸ್ವತಂತ್ರವಾಗಿ ಪ್ರಕರಣವನ್ನು ಪರಿಶೀಲಿಸುವ ಬದಲು, ಹಿಂದಿನ ತನಿಖೆಯಲ್ಲಿ ಸಂಗ್ರಹಿಸಲಾಗಿದ್ದ ಸಾಕ್ಷ್ಯಗಳು ಮತ್ತು ದಾಖಲೆಗಳನ್ನೇ ಆಧರಿಸಿ ವರದಿ ಸಲ್ಲಿಸಿರುವುದು ಸೂಕ್ತ ತನಿಖಾ ಕ್ರಮವಲ್ಲ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಹೊಸ ತನಿಖೆಯ ವೇಳೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಸ್ವತಂತ್ರವಾಗಿ ಪರಿಶೀಲಿಸುವ ಅಗತ್ಯವಿದೆ ಎಂಬ ಸಂದೇಶವನ್ನು ನ್ಯಾಯಪೀಠದ ನಿರ್ದೇಶನ ನೀಡಿದೆ. ಮರುತನಿಖೆಗಾಗಿ ರಚಿಸಲಾಗುವ ತಂಡದಲ್ಲಿ ಹಿಂದಿನ ತನಿಖೆಯಲ್ಲಿ ಭಾಗಿಯಾಗಿದ್ದ ಅಧಿಕಾರಿಗಳಿಗೆ ಸ್ಥಾನ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

# ಎಸ್ಐಆರ್ ನೋಟೀಸ್ : ಮತದಾರರಿಗೆ ನೆರವಾಗಲು ಮನೆ ಬಾಗಿಲಿಗೆ ಪಕ್ಷಗಳ ಕಾರ್ಯಕರ್ತರು

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯಲ್ಲಿ ನಿಮಗೆ ಏನಾದರೂ ನೋಟಿಸ್ ಬಂದಿದ್ದರೆ, ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಲು ಸಹಾಯ ಮಾಡಲು ರಾಜಕೀಯ ಪಕ್ಷಗಳ ಕಾರ್ಯಕರ್ತರು ಶೀಘ್ರದಲ್ಲೇ ನಿಮ್ಮ ಮನೆ ಬಾಗಿಲಿಗೆ ಬರುವ ಸಾಧ್ಯತೆಯಿದೆ.**

ಲಕ್ಷಾಂತರ ಮತದಾರರಿಗೆ ನೋಟಿಸ್‌ಗಳು ತಲುಪುತ್ತಿರುವ ಹಿನ್ನೆಲೆಯಲ್ಲಿ, ಅಂತಿಮ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಉಳಿದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ದಾಖಲೆಗಳನ್ನು ಒದಗಿಸುವುದು, ವಿಚಾರಣೆಗಳಿಗೆ ಹಾಜರಾಗುವುದು ಮತ್ತು ಫಾರ್ಮ್–6 ಅರ್ಜಿಗಳನ್ನು ಸಲ್ಲಿಸುವಲ್ಲಿ ಜನ–ರಿಗೆ ಸಹಾಯ ಮಾಡಲು ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಮ್ಮ ಬೂತ್ ಮಟ್ಟದ ಏಜೆಂಟ್‌ಗಳನ್ನು ಸಕ್ರಿಯಗೊಳಿಸಿವೆ. ಈ ಚಟುವಟಿಕೆಯು ಮತದಾರರ ಪಟ್ಟಿ ಪರಿಷ್ಕರಣಾ ಪ್ರಕ್ರಿಯೆಯನ್ನು ಕ್ಷೇತ್ರ ಮಟ್ಟದ ಕಾರ್ಯಾಚರಣೆಯನ್ನಾಗಿ ಪರಿವರ್ತಿಸಿದೆ. ಬಿಬಿಎಂಪಿ ದಕ್ಷಿಣ ವಲಯದಲ್ಲಿ 4 ಲಕ್ಷಕ್ಕೂ ಹೆಚ್ಚು ಮತದಾರರಿಗೆ ನೋಟಿಸ್‌ಗಳು ತಲುಪಲಿವೆ.

ಪರಿಶೀಲನಾ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಏಜೆಂಟ್‌ಗಳು ಮತದಾರ–ರಿಗೆ ಸಹಾಯ ಮಾಡುತ್ತಿದ್ದಾರೆ ಎಂದು ಸಚಿವರು ಹಾಗೂ ಬಿಟಿಎಂ ಲೇಔಟ್‌ನ ಕಾಂಗ್ರೆಸ್ ಶಾಸಕ ರಾಮಲಿಂಗಾ ರೆಡ್ಡಿ ತಿಳಿಸಿದ್ದಾರೆ. “ನೋಟಿಸ್‌ಗೆ ಕಾರಣವಾದ ಸಣ್ಣಪುಟ್ಟ ತಪ್ಪುಗಳನ್ನು ಗಂಭೀರ ಉಲ್ಲಂಘನೆಗಳೆಂದು ಪರಿಗಣಿಸಬಾರದು ಎಂದು ನಾವು ನಿರಂತರವಾಗಿ ಹೇಳುತ್ತಲೇ ಬಂದಿದ್ದೇವೆ” ಎಂದು ಅವರು ಹೇಳಿದರು. ಕೋಲಾರದಲ್ಲಿ 1.4 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ನೀಡಲಾಗಿದೆ. ತಮ್ಮ ಅಂಗರಕ್ಷಕ ವಿನೋದ್ ಕುಮಾರ್‌ಗೂ ಅಂತಹ ನೋಟಿಸ್ ಬಂದಿದೆ ಎಂದು ಕಾಂಗ್ರೆಸ್ ಶಾಸಕ ಕೋತೂರು ಜಿ. ಮಂಜುನಾಥ್ ತಿಳಿಸಿದರು. “ಜನರು ಖುದ್ದಾಗಿ ವಿಚಾರಣೆಗೆ ಹಾಜರಾಗಬೇಕು



ಎಂದು ನಾವು ನಮ್ಮ ಅನುಸರಣಾ ಕ್ರಮಗಳಲ್ಲಿ ಸ್ಪಷ್ಟಪಡಿಸಿದ್ದೇವೆ” ಎಂದು ಅವರು ಹೇಳಿದರು.

ಬಂಟ್ವಾಳದಲ್ಲಿ ತಮ್ಮ ಕ್ಷೇತ್ರದಲ್ಲಿ 8,000 ನೋಟಿಸ್‌ಗಳನ್ನು ನೀಡಲಾಗಿದೆ ಎಂದು ಬಿಜೆಪಿ ಶಾಸಕ ರಾಜೇಶ್ ನಾಯ್ಕ್ ತಿಳಿಸಿದರು. ಜಿಲ್ಲೆಯಾದ್ಯಂತ ಒಟ್ಟು 1.5 ಲಕ್ಷಕ್ಕೂ ಹೆಚ್ಚು ನೋಟಿಸ್‌ಗಳನ್ನು ನೀಡಲಾಗಿದೆ. ಮೃತ ಮತದಾರರ ಹೆಸರುಗಳನ್ನು ತೆಗೆದುಹಾಕುವುದು ಮತ್ತು ವಿವಾಹಿತ ಮಹಿಳೆಯರ ವಿಳಾಸಗಳನ್ನು ನವೀಕರಿಸುವುದು ಸೇರಿದಂತೆ ಕಳೆದ ಮೂರು ವರ್ಷಗಳಿಂದ ನಡೆಸಿದ ಕ್ಷೇತ್ರ ಮಟ್ಟದ ಕೆಲಸವೇ ಇದಕ್ಕೆ ಕಾರಣ ಎಂದು ಅವರು ಹೇಳಿದರು. ಬಿಜೆಪಿಯ ಎಸ್ಐಆರ್ ಕಾರ್ಯಕ್ರಮದ ಸಂಚಾಲಕ ದತ್ತಾತ್ರಿ ಎಸ್. ಮಾತನಾಡಿ, ಪಕ್ಷವು ದೈನಂದಿನ ಮೇಲ್ವಿಚಾರಣಾ ವ್ಯವಸ್ಥೆಯನ್ನು ರೂಪಿಸಿದೆ ಎಂದು ತಿಳಿಸಿದರು.ರಾಜ್ಯದಲ್ಲಿ 10 ವಿಭಾಗಗಳಿವೆ ಮತ್ತು ಪ್ರತಿಯೊಂದು ವಿಭಾಗವು ಹಲವಾರು ಜಿಲ್ಲೆಗಳನ್ನು ಒಳಗೊಂಡಿದೆ ಎಂದು ಅವರು ಹೇಳಿದರು.

ಪ್ರತಿ ವಿಭಾಗಕ್ಕೂ ಒಬ್ಬ ಸಂಯೋಜ–ಕರಿದ್ದು, ಅವರು ಎಸ್ಐಆರ್ ಕಾರ್ಯವನ್ನು ಮೇಲ್ವಿಚಾರಣೆ ಮಾಡುತ್ತಾರೆ. “ಪ್ರತಿದಿನ ರಾತ್ರಿ 8.30ಕ್ಕೆ, ನಾವು ಅಂದು ಎದುರಾದ ಸಮಸ್ಯೆಗಳು ಮತ್ತು ಮರುದಿನದ ಗುರಿಗಳ ಬಗ್ಗೆ ಚರ್ಚಿಸುತ್ತೇವೆ” ಎಂದು ಅವರು ಹೇಳಿದರು. “ಬಿಜೆಪಿ ವ್ಯಾಪಕವಾದ ತಳಮಟ್ಟದ ಕೆಲಸವನ್ನು ಹೊಂದಿರುವ ಕಾರ್ಯಕರ್ತ–ಆಧಾರಿತ ಪಕ್ಷವಾಗಿದೆ.

ಜನರಿಗೆ ಸಹಾಯ ಮಾಡಲು ನಮ್ಮಲ್ಲಿ 54,000ಕ್ಕೂ ಹೆಚ್ಚು ಸಕ್ರಿಯ ಬಿಎಲ್‌ಎ–2 ಪ್ರತಿನಿಧಿಗಳಿದ್ದಾರೆ. ಎಎಸ್‌ಡಿಡಿಒ ವರ್ಗದಲ್ಲಿ ಪಟ್ಟಿಯಿಂದ ಹೊರಗುಳಿದಿರುವ ಮತದಾರರ ಪೈಕಿ ಕನಿಷ್ಠ ಶೇ. 50ರಷ್ಟು ಮಂದಿಯನ್ನು ಮರುಸೇರ್ಪಡೆಗೊಳಿಸುವ ಗುರಿಯನ್ನು ನಾವು ಹೊಂದಿದ್ದೇವೆ” ಎಂದು ಅವರು ಹೇಳಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿ, ಎಎಸ್‌ಡಿಡಿಒ ವರ್ಗದಡಿ ಕೈಬಿಡಲಾದ ಮತದಾರರು ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಅಥವಾ ದಾಖಲೆಗಳ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ಯಾವುದೇ ತೊಂದರೆಗಳನ್ನು ಎದುರಿಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು. ಫಾರ್ಮ್–6 ಅನ್ನು ಭರ್ತಿ ಮಾಡಿ ಸಲ್ಲಿಸಲು ಸಹಾಯ ಮಾಡಲು ಬಿಎಲ್‌ಎ–1 ಪ್ರತಿನಿಧಿಗಳು, ಜಿಲ್ಲಾ ಮಟ್ಟದ ಸದಸ್ಯರು ಮತ್ತು ಬ್ಲಾಕ್ ಅಧ್ಯಕ್ಷರು ಮನೆಗಳಿಗೆ ಭೇಟಿ ನೀಡುತ್ತಿದ್ದಾರೆ ಎಂದು ಅವರು ಹೇಳಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101